ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 32 ಆಗಸ್ಟ್ 15, 1982 ಬೆಲೆ 60 ಪೈಸೆ

ಸ್ವಾತಂತ್ರ್ಯಕ್ಕೆ ಗಂಡಾಂತರ

ಭಾರತ ದೇಶವನ್ನು ಬ್ರಿಟಿಷರು ಬಿಟ್ಟು ಹೋಗಿ 1982 ಆಗಸ್ಟ್ 15 ಕ್ಕಾಗುವಾಗ ಮೂವತ್ತೈದು ವರ್ಷಗಳಾಗುತ್ತವೆ. ಮೂವತ್ತೈದನೆ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಸಂದರ್ಭದಲ್ಲಿ ಸ್ವಾತಂತ್ರ್ಯ ನಂತರದ ಭಾರತ ದೇಶವನ್ನು, ದೇಶದ ಪರಿಸ್ಥಿತಿಯನ್ನು ಒಂದಿಷ್ಟು ಅವಲೋಕಿಸುವುದು ಅವಶ್ಯ. ಸ್ವಾತಂತ್ರ್ಯ ಪಡೆದ ಮೇಲೆ ಅಧಿಕಾರಕ್ಕೆ ಬಂದಿರುವ ಬಂಡವಾಳಷಾಹಿ-ಭೂಮಾಲಿಕ ಸರಕಾರಗಳು ದೇಶವನ್ನು ಬಂಡವಾಳಷಾಹಿ ಪಥದಲ್ಲಿ ಕೊಂಡೊಯ್ಯುತ್ತಾ ಬಂದುದರ ಪರಿಣಾಮವಾಗಿ ದೇಶವು ಇಂದು ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಜಾಗತಿಕ ಬಂಡವಾಳಷಾಹಿ ವ್ಯವಸ್ಥೆಯು ಸಾರ್ವತ್ರಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಬಂಡವಾಳಷಾಹಿ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಭಾರತ ದೇಶದ ಆರ್ಥಿಕ ಬಿಕ್ಕಟ್ಟು ಅತ್ಯಂತ ಆಳವಾಗುತ್ತಿದೆ. "ಹಣದುಬ್ಬರ ಮತ್ತು ಸ್ಥಗಿತತೆ"ಗಳಲ್ಲಿ ಸಿಲುಕಿ ಹಾಕಿಕೊಂಡಿರುವ ಭಾರತ ದೇಶದಲ್ಲಿ ಬೆಲೆ ಏರಿಕೆ ಮತ್ತು ನಿರುದ್ಯೋಗಗಳು ಬೃಹದಾಕಾರವಾಗಿ ಬೆಳೆದಿವೆ. ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದ್ದಂತೆಯೇ ಸಾಮಾಜಿಕ ಬಿಕ್ಕಟ್ಟು ಮತ್ತು ರಾಜಕೀಯ ಅಸ್ಥಿರತೆಗಳೂ ತೀವ್ರಗತಿಯಿಂದ ಬೆಳೆಯುತ್ತಾ ಬಂದಿವೆ. ಈ ಎಲ್ಲವುಗಳು ಜನತೆಯ ಎಲ್ಲ ಸ್ಥರಗಳನ್ನೂ; ಎಲ್ಲಾ ವರ್ಗಗಳನ್ನೂ ಬಾಧಿಸುತ್ತಿವೆ.

ಮೂವತ್ತೈದನೆ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲ್ಪಡುವ ಸಂದರ್ಭದಲ್ಲಿ ಭಾರತ ದೇಶದ ಸ್ವಾತಂತ್ರ್ಯ, ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ಉಂಟಾಗುವ ಪರಿಸ್ಥಿತಿಯುಂಟಾಗಿದೆ. ದೇಶದ ಅರ್ಥ ವ್ಯವಸ್ಥೆಯನ್ನು ಬಿಕ್ಕಟ್ಟಿಗೆ ಸಿಲುಕಿ ಹಾಕಿಸಿಕೊಂಡಿರುವ ಬಂಡವಾಳಷಾಹಿ-ಭೂಮಾಲಿಕರ ಪರ ಕಾಂಗ್ರೆ ಸರಕಾರವು ವಿದೇಶಿ ಬಂಡವಾಳಷಾಹಿಗಳ ಬಹುರಾಷ್ಟ್ರೀಯ ಬಂಡವಾಳಷಾಹಿ ಮತ್ತು ಸಾಮ್ರಾಜ್ಯಷಾಹಿ ಶಕ್ತಿಗಳಿಗೆ ಮೊರೆ ಹೋಗುತ್ತಿದ್ದು, ದೇಶದ ಸ್ವಾತಂತ್ರ್ಯವನ್ನೆ ಒತ್ತೆ ಇಡುತ್ತಿದೆ. ಭಾರತ ದೇಶವನ್ನಾಳುವ ಇಂದಿರಾ ಗಾಂಧಿ ಸರಕಾರವು ಅತ್ಯಂತ ಕಠಿಣ ಷರತ್ತುಗಳಿಗೆ ಒಪ್ಪಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಬೃಹತ್ ಪ್ರಮಾಣದ ಸಾಲ ಪಡೆಯುತ್ತಿರವುದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ಉಂಟುಮಾಡುತ್ತಿವೆ. ದೇಶದ ಗಡಿನಾಡಿನಲ್ಲೂ, ಸುತ್ತಮುತ್ತಲೂ ಯುದ್ಧದ ವಾತವರಣವನ್ನೂ, ಅಸ್ಥಿರತೆಯನ್ನು ಉಂಟುಮಾಡುತ್ತಿರುವ ಅಮೇರಿಕನ್ ಸಾಮ್ರಾಜ್ಯಷಾಹಿಯು ದೇಶದೊಳಗೆ ಛಿದ್ರಕಾರಿ ಶಕ್ತಿಗಳಿಗೆ ಬೆಂಬಲವಿತ್ತು ದೇಶದ ಸಮಗ್ರತೆಯನ್ನು ನಾಶಮಾಡಲು ಹವಣಿಸುತ್ತಿದೆ. ಭಾಷೆ, ಗಡಿ, ಕೋಮು, ಧರ್ಮ, ಜಾತಿ ಇವೇ ಮೊದಲಾದುವುಗಳನ್ನು ಬಳಸಿಕೊಂಡು ಪ್ರತ್ಯೇಕತಾವಾದಿ ಮತ್ತು ವಿಭಜನವಾದಿ ಚಳುವಳಿಗಳನ್ನು ನಡೆಸಲು ಪ್ರೋತ್ಸಾಹಿಸುವುದರ ಮೂಲಕ ಜನತೆಯ ಒಗ್ಗಟ್ಟನ್ನು, ರಾಷ್ಟ್ರೀಯ ಸಮಗ್ರತೆಯನ್ನು ಛಿದ್ರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳು ಗಂಭೀರ ಪರಿಸ್ಥಿತಿಯನ್ನುಂಟುಮಾಡಿವೆ.

ಆಸ್ಸಾಮ್ ಚಳುವಳಿ, ಪ್ರತ್ಯೇಕ ಸಿಖ್ ರಾಜ್ಯಕ್ಕಾಗಿ ನಡೆಯುತ್ತಿರುವ ತೀವ್ರಗಾಮಿ ಚಟುವಟಿಕೆಗಳು ಮತ್ತು ಇದೇ ರೀತಿಯಲ್ಲಿ ದೇಶದ ಬೇರೆ ಬೇರೆಡೆ ನಡೆಸುತ್ತಿರುವ ಛಿದ್ರಕಾರಿ ಚಟುವಟಿಕೆಗಳು, ಹಿಂದೂ ಬಹುಸಂಖ್ಯಾತ ಕೋಮುವಾದ ಮತ್ತು ಮುಸ್ಲಿಮ್ ಅಲ್ಪಸಂಖ್ಯಾತ ಮತೀಯವಾದ, ದಲಿತರ ಮೇಲಿನ ಹಲ್ಲೆ, ಎಡ ಮುಖವಾಡಗಳನ್ನು ಧರಿಸಿ ಕೆಲವು ಕ್ರಿಶ್ಚಿಯನ್ ಮಿಷಿನರಿ ಸಂಸ್ಥೆಗಳು ಮತ್ತು ಸಂಘಟನೆಗಳು ಬೆಳೆಯುತ್ತಿರುವ ಎಡ ಶಕ್ತಿಗಳನ್ನು, ಅದರಲ್ಲೂ ಸಿ.ಪಿ.ಐ.(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳ ಮೇಲೆ ನಡೆಸುತ್ತಿರುವ ಧಾಳಿ ಇವೆಲ್ಲಾ ತೋರ್ಕೆಗೆ ಬೇರೆಬೇರೆಯಾಗಿ ಕಂಡುಬಂದರೂ ಇವೆಲ್ಲಕ್ಕೂ ಸಂಬಂಧವಿದೆ, ಈ ಎಲ್ಲದರ ಹಿಂದೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಕೈವಾಡವಿದೆ. ದೇಶದಲ್ಲಿ ಹಳೆ ಊಳಿಗ ಮಾನ್ಯ ಪದ್ಧತಿಯ ಅವಶೇಷಗಳನ್ನು ನಾಶ ಮಾಡದೆ, ಅವುಗಳ ಮೇಲೆ ಬಂಡವಾಳಶಾಹಿ ವ್ಯವಸ್ಥೆಯನ್ನೂ ಬೆಳೆಸುತ್ತಾ ಬಂದುದರಿಂದ ಹಳೇ ಸಾಮಾಜಿಕ ಅನಿಷ್ಟಗಳೆಲ್ಲವೂ ಹಾಗೆಯೇ ಉಳಿದುಕೊಂಡಿದೆ. ಇದರೊಂದಿಗೆ ಬಂಡವಾಳಶಾಹಿ ಮಾರ್ಗದಲ್ಲಿ ಹೋಗುತ್ತಾ ಬಂದುದರಿಂದ ಉಂಟಾಗಿರುವ ದೇಶದೊಳಗಿನ ಅಸಮಾನ ಬೆಳವಣಿಗೆಗಳೂ ಸೇರಿಕೊಂಡು ಇವೆಲ್ಲವುಗಳನ್ನು ಛಿಧ್ರಕಾರಿಶಕ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಎಡಶಕ್ತಿಗಳೂ ಈ ದಿಸೆಯಲ್ಲಿ, ಅಂದರೆ ವರ್ಗ ಮತ್ತು ಆರ್ಥಿಕ ಹೋರಾಟಗಳೊಂದಿಗೆ ಸಾಮಾಜಿಕ ಅನಿಷ್ಟಗಳ ವಿರುದ್ಧ ಸಾಕಷ್ಟು ಹೋರಾಡದಿರುವುದು ಛಿದ್ರಕಾರಿಶಕ್ತಿಗಳಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಸಹಾಯಕವಾಗಿದೆ. ಕಾಂಗ್ರೆ ಸರಕಾರದ ಧೋರಣೆಗಳು ಛಿಧ್ರಕಾರಿ ಶಕ್ತಿಗಳಿಗೆ ಜನತೆಯಿಂದ ಪ್ರತ್ಯೇಕಿಸುವುದಕ್ಕೆ ಮತ್ತು ಅವುಗಳ ವಿರುದ್ಧ ಹೋರಾಡುವುದಕ್ಕೆ ಬದಲು ಛಿದ್ರಕಾರಿಶಕ್ತಿಗಳಿಗೇ ಸಹಾಯಕವಾಗಿವೆ.

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ದೇಶದ ಎಲ್ಲ ದುಡಿಯುವ ಜನಕೋಟಿ ಮತ್ತು ಜನಸಾಮಾನ್ಯರ ಐಕ್ಯತೆಯನ್ನು ಸಾಧಿಸಿ, ಅದರ ಮೂಲಕ ಸಾಮ್ರಾಜ್ಯಷಾಹಿ ಪಿತೂರಿ ಮತ್ತು ಛಿಧ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ, ಈ ದುಷ್ಟ ಶಕ್ತಿಗಳನ್ನು ಹಿಮ್ಮೆಟಿಸಬೇಕಾಗಿದೆ. ಜನತೆಗೆ ತಿಳುವಳಿಕೆಯನ್ನಿತ್ತು, ಈ ದುಷ್ಟ ಛಿದ್ರಕಾರಿ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸಿ, ಅವುಗಳ ವಿರುದ್ಧ ಹೋರಾಡಬೇಕು. ಈ ದಿಸೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳೂ, ಇನ್ನಿತರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ, ದೇಶದ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರುವ ಎಲ್ಲರೂ ಒಂದಾಗಿ ಶ್ರಮಿಸಬೇಕಾಗಿದೆ. ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವ ಗುರುತರ ಜವಾಬ್ದಾರಿ ಈ ಶಕ್ತಿಗಳ ಮೇಲಿದೆ.



ಬಿಳಿದೊಗಲ ಸುಲಿಗೆಗಾರರನ್ನು ಕಡಲಾಚೆಗೆ ಎಸೆದ ಮಹಾಸಮರದಲ್ಲಿ ಹುತಾತ್ಮರಾದವರ ಸಂಖ್ಯೆ ಸಹಸ್ರ ಸಹಸ್ರ. ಆ ವೀರಯೋಧರು ಬಸಿದ ರಕ್ತವೀಗ ಹೆಪ್ಪುಗಟ್ಟಿದ ಕೆಂಪು ಮಡುವು ಅಳೆಯಲಾಗದ ವಿಸ್ತಾರ ಅದರದು. ಆ ತಟಾಕದ ಆಳದಿಂದ ಹುತಾತ್ಮರ ಚೇತನ ಹುಯಿಲಿಡುತ್ತಿದೆ :

"ನಾವೆಲ್ಲ ಕನಸುಕಂಡ ಹೊಸಬದುಕು ಕೈಗೂಡಿತೆ? ಉಳುವವನು ಹೊಲದೊಡೆಯನಾದನೆ? ತಾನು ಸೃಷ್ಟಿಸುವ ಸಂಪತ್ತಿನ ಒಡೆತನ ಶ್ರಮಜೀವಿ ವರ್ಗದ ಕೈಗೆ ಬಂತೆ? ದಲಿತರು, ಜೀತಗಾರರು, ಕೊಳೆಗೇರಿಯ ಬಡಪಾಯಿಗಳು, ಒಪ್ಪೊತ್ತಿನ ಊಟದಿಂದಲೂ ವಂಚಿತರು ಈಗಿಲ್ಲವೆ? ಗುತ್ತಿಗೆ ಬಂಡವಾಳಗಾರರ, ನವಸಾಮ್ರಾಜ್ಯವಾದಿಗಳ ಕಂಟಕದಿಂದ ದೇಶ ಮುಕ್ತವೆ? ನಿರ್ಭಯವಾಗಿ ಮಾತನಾಡುವ, ಬರೆಯುವ, ಒಗ್ಗೂಡಿ ವಾದಿಸುವ, ನ್ಯಾಯ ಸಮ್ಮತ ಹಕ್ಕುಗಳಿಗಾಗಿ ಹೋರಾಡುವ ಸ್ವಾತಂತ್ರ್ಯ ನಿಮಗಿದೆಯೆ? ಇಲ್ಲ—ಎನ್ನುತ್ತೀರಾ? ಇಲ್ಲ, ಯಾಕೆ? ಯಾಕೆ?"

ಎಸ್. ಎಫ್. ಐ. ಚಟುವಟಿಕೆಗಳು

ಎಸ್. ಎಫ್. ಐ. ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ಈ ಕೆಳಕಂಡ ಹೇಳಿಕೆಯನ್ನು ಪತ್ರಿಕಾ ಪ್ರಕಟನೆಗಾಗಿ ಬಿಡುಗಡೆ ಮಾಡಿದೆ :

ಪ್ರವೇಶ ನಿರಾಕರಣೆಯ ಖಂಡನೆ:

ಎಸ್. ಎಫ್. ಐ. ಮುಖಂಡನಾಗಿ ಆಳುವ ಪಕ್ಷದ ರಾಜಕಾರಣಿಗಳಿಗೆ ವಿರುದ್ಧವಾದ ರಾಜಕೀಯನಿಷ್ಠೆ ಹೊಂದಿರುವ ಏಕೈಕ ಕಾರಣದಿಂದ ಕೋಲಾರ ಜಿಲ್ಲೆಯ ಚಿಂತಾಮಣಿಯ ಎ. ಎಂ. ಕಾಲೇಜಿನ ಆಡಳಿತ ವರ್ಗವು ಬಿ. ಸಿ. ಬೈಯಾರೆಡ್ಡಿಯವರಿಗೆ ಅಂತಿಮ ಬಿ.ಎಸ್‌ಸಿ. ತರಗತಿಗೆ ಪ್ರವೇಶ ನಿರಾಕರಿಸಿರುವುದನ್ನು ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಬೈಯಾರೆಡ್ಡಿಯವರು ಆಗಸ್ಟ್ 4ರಂದು, ನ್ಯಾಯಕೋರಿ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ (ಡಬ್ಲ್ಯು. ಪಿ. 27377 ; 82) ದಾಖಲೆ ಮಾಡಿದ್ದಾರೆ. ಎ. ಎಂ. ಕಾಲೇಜಿನ ಆಡಳಿತವರ್ಗದ ಈ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ಎಲ್ಲ ವಿದ್ಯಾರ್ಥಿಗಳು ಪ್ರತಿಭಟಿಸಲು ಎಸ್. ಎಫ್. ಐ. ಈ ಮೂಲಕ ಕರೆ ನೀಡುತ್ತದೆ.

ಬಿ ಸಿ. ಎಂ. ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆ :

ರಾಜ್ಯದ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ "ಕ್ಯಾರಿಓವ್ಹರ" ಪಡೆದು ಮುಂದಿನ ತರಗತಿಗೆ ಬಡ್ತಿ ಪಡೆದಿರುವ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವನ್ನು ಮುಂದುವರಿಸಲು ನಿರಾಕರಿಸಲಾಗಿದ್ದು ಇದರಿಂದ ನೂರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನೇ ತೊರೆಯಬೇಕಾಗಿ ಬಂದಿದೆ. ಈ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವನ್ನು ಮುಂದುವರಿಸಬೇಕೆಂದು ಎಸ್. ಎಫ್. ಐ. ಒತ್ತಾಯಿಸುತ್ತದೆ.

ನೆರೆ ಸಂತ್ರಸ್ತರ ನೆರವಿಗೆ ಕರೆ :

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನೆರೆ ಹಾವಳಿಯಿಂದ ತೊಂದರೆಗೊಳಗಾಗಿ ಜನತೆಯ ಬಗ್ಗೆ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ಸಹಾನುಭೂತಿ ವ್ಯಕ್ತಪಡಿಸಿ ಎಸ್. ಎಫ್. ಐ. ಶಾಖೆಗಳು ನೆರೆ ಸಂತ್ರಸ್ತರಿಗೆ ಎಲ್ಲ ರೀತಿಯ ಸಹಾಯ ಒದಗಿಸಲು ಈ ಮೂಲಕ ಕರೆ ನೀಡಿದೆ.

ಹೊಸಪೇಟೆ :

ಜುಲೈ 27 ಮತ್ತು 28 ರಂದು ಕಮಲಾಪುರ (ಹೊಸಪೇಟೆಯ ಬಳಿ) ದಲ್ಲಿ ಬಳ್ಳಾರಿ ಜಿಲ್ಲಾ ಕಾರ್ಯಕರ್ತರ ಶಿಬಿರ ನಡೆಯಿತು. ಶಿಬಿರಕ್ಕೆ 38 ಕಾರ್ಯಕರ್ತರು ಆಗಮಿಸಿದ್ದರು.

ಬೆಂಗಳೂರಿನ ಸಂಗಾತಿ ಎ. ಎಸ್. ಆಚಾರ್ಯ ಅವರು ವೈಜ್ಞಾನಿಕ ಸಮಾಜವಾದ ಕುರಿತು ವಿವರಿಸಿದರು. ಶಿಕ್ಷಣ ಪದ್ಧತಿ, ಎಸ್. ಎಫ್. ಐ. ಸಂವಿಧಾನ, ಕಾರ್ಯಕ್ರಮ, ಬೇಡಿಕೆಗಳು ಈ ವಿಷಯವಾಗಿ ಕಾಂ| ಎಸ್. ಆರ್. ಆರಾಧ್ಯ ವಿವರಿಸಿದರು.

ಸಂಘಟನಾ ಸಮಿತಿ :

ಪುನರ್ರಚಿತ ಜಿಲ್ಲಾ ಸಂಘಟನಾ ಸಮಿತಿಗೆ 11 ಜನ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಸಂಚಾಲಕರಾಗಿ ಶಾಂತಕುಮಾರಿ, ಸಹ ಸಂಚಾಲಕರಾಗಿ ಗುರುಶಾಂತ ಮತ್ತು ಉಮೇಶ್ ಆಯ್ಕೆಯಾಗಿದ್ದಾರೆ.

ನವೆಂಬರ್ ತಿಂಗಳಿನಲ್ಲಿ ಹರಪನಹಳ್ಳಿಯಲ್ಲಿ ಜಿಲ್ಲಾ ಸಮ್ಮೇಳನ ನಡೆಸುವುದೆಂದು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕಾಂ| ಆರಾಧ್ಯ ಮತ್ತು ಕಾಂ| ಬಸವರಾಜ್ ಹಾಜರಿದ್ದು ಮಾರ್ಗದರ್ಶನ ನೀಡಿದರು.

ಹರಪನಹಳ್ಳಿ :

29-7-82 ರಂದು ಹರಪನಹಳ್ಳಿ ಘಟಕವು ವಿಶೇಷ ಸಭೆಯನ್ನು ಏರ್ಪಡಿಸಿತ್ತು. ಸಭೆಗೆ ಕಾಂ| ಎಸ್. ಆರ್. ಆರಾಧ್ಯ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಂ| ಉಳ್ಳೇಶ್ ಅವರ ಸ್ವಾಗತಗೀತೆಯೊಡನೆ ಸಭೆ ಪ್ರಾರಂಭವಾಯಿತು. ಕಾಂ| ಇಸ್ಮಾಯಿಲ್ ಸ್ವಾಗತ ಕೋರಿದರು. ಕಾಂ| ರಾಜಾಸಾಹೇಬ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾಂ| ಆರಾಧ್ಯ ಮಾತನಾಡುತ್ತಾ, ಎಸ್. ಎಫ್. ಐ. ನ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಕೊನೆಯಲ್ಲಿ ಕಾಂ| ಶಿವಯೋಗಿ ವಂದನಾರ್ಪಣೆ ಮಾಡಿದರು. ಸಭೆಯಲ್ಲಿ ಸುಮಾರು 300 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಚಿಂತಾಮಣಿ :

5-8-82 ರಂದು ಚಿಂತಾಮಣಿ ಸ್ಥಳೀಯ ಘಟಕದ ಸಭೆ ಜರುಗಿತು. ಕಾಂ| ಬೈಯಾರೆಡ್ಡಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ರಾಜ್ಯ ಸಮಿತಿ ಅಧ್ಯಕ್ಷ ಕಾಂ| ಜಯಕುಮಾರ್ ಮತ್ತು ಉಪಾಧ್ಯಕ್ಷ ಕಾಂ| ರಾಜಣ್ಣ ಹಾಜರಿದ್ದರು. ಸಭೆಯಲ್ಲಿ, ಸಂಘಟನೆಯನ್ನು ಬಲಪಡಿಸಲು ರಾಜ್ಯ ಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲು ಕಾರ್ಯಕ್ರಮ ರೂಪಿಸಲಾಯಿತು.

ಸೆಪ್ಟೆಂಬರ್ ಮಧ್ಯದಲ್ಲಿ ಶಾಖೆಯ ಸಮ್ಮೇಳನ ಹಾಗೂ ಕಾರ್ಯಕರ್ತರ ತರಬೇತಿ ಶಿಬಿರವನ್ನು ನಡೆಸಲು ತೀರ್ಮಾನಿಸಲಾಯಿತು. ಕಾಂ| ಬೈಯಾರೆಡ್ಡಿಯವರಿಗೆ ಕಾಲೇಜಿನಲ್ಲಿ ಪ್ರವೇಶ ನಿರಾಕರಿಸಿರುವದನ್ನು ಸಭೆ ಖಂಡಿಸಿತಲ್ಲದೇ ಆಡಳಿತ ವರ್ಗದ ಕುತಂತ್ರದ ವಿರುದ್ಧ ಹೋರಾಟ ನಡೆಸಬೇಕೆಂದು ತೀರ್ಮಾನಿಸಿತು.

ಚಿಂತಾಮಣಿಯ ಚಿತ್ರಮಂದಿರ ಮತ್ತು ಹೋಟೆಲ್ ತಿಂಡಿ ದರಗಳ ಏರಿಕೆಯನ್ನು ಇಳಿಸಬೇಕೆಂಬ ವಿದ್ಯಾರ್ಥಿಗಳ ಬೇಡಿಕೆಗೆ ಜಯ ದೊರೆತಿದೆ. ವಿದ್ಯಾರ್ಥಿ ಮುಖಂಡರ ಮತ್ತು ಮಾಲೀಕರ ನಡುವೆ ನಡೆದ ಮಾತುಕತೆಯಿಂದ ಆದ ಒಪ್ಪಂದದಂತೆ ಬೆಲೆಗಳನ್ನು ಸ್ವಲ್ಪಮಟ್ಟಿಗೆ ಇಳಿಸಲಾಗಿದೆ. ಮಾತುಕತೆಯಲ್ಲಿ ಎಸ್. ಎಫ್. ಐ. ಘಟಕದ ಕಾರ್ಯದರ್ಶಿ ಕಾಂ| ಹರೀಂದ್ರ ಹಾಗೂ ಕಾಂ| ಬೈಯಾರೆಡ್ಡಿ ಮುಂತಾದವರು ಪಾಲ್ಗೊಂಡಿದ್ದರು.

ಕೋಲಾರ :

6-8-82 ರಂದು ಸ್ಥಳೀಯ ಘಟಕದ ಸಂಘಟನಾ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ 50 ಜನ ಭಾಗವಹಿಸಿದ್ದರು. ಕಾಂ| ಜಯಕುಮಾರ್ ಮತ್ತು ಕಾಂ| ರಾಜಣ್ಣ ಸಭೆಗೆ ಆಗಮಿಸಿದ್ದರು.

4 ಜನ ಸಂಚಾಲಕರನ್ನೊಳಗೊಂಡ 23 ಜನ ಸದಸ್ಯರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಂಚಾಲಕರಾಗಿ ಕಾಂ| ಬೈರಾರೆಡ್ಡಿ, ಕೆ. ಬಿ. ಗೋಪಾಲಕೃಷ್ಣ ಹಾಗೂ ನಾರಾಯಣಸ್ವಾಮಿಯವರುಗಳನ್ನು ಆಯ್ಕೆ ಮಾಡಲಾಯಿತು.

ರಾಜ್ಯ ಸಮಿತಿ ತೀರ್ಮಾನದಂತೆ ಶೀಘ್ರದಲ್ಲೇ ಕಾರ್ಯಕರ್ತರ ತರಬೇತಿ ಶಿಬಿರ ನಡೆಸುವ ನಿರ್ಧಾರ ಕೈಗೊಳ್ಳಲಾಯಿತು.

ಕೋಲಾರ ಟೌನ್‌ನಲ್ಲಿರುವ ಬಿ. ಸಿ. ಎಂ. ಹಾಸ್ಟೆಲ್‌ಗಳಲ್ಲಿ ಕ್ಯಾರಿಓವ್ಹರ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಿರುವುದನ್ನು ಸಭೆ ಖಂಡಿಸಿತು. ಈ ಪ್ರವೇಶ ನೀಡದಿದ್ದಲ್ಲಿ ಚಳುವಳಿ ಹೂಡಬೇಕಾದೀತೆಂದು ಸರ್ಕಾರವನ್ನು ಎಚ್ಚರಿಸಲಾಗಿದೆ.

ಬೆಂಗಳೂರು :

ರಾಜ್ಯ ಸಮಿತಿಯ ಆದೇಶದಂತೆ ಬೆಂಗಳೂರು ನಗರ ಸಮಿತಿಯು ಜುಲೈ 31 ಮತ್ತು ಆಗಸ್ಟ್ 1ರಂದು ಜಿಲ್ಲಾಮಟ್ಟದ ಕಾರ್ಯಕರ್ತರ ಶಿಬಿರ ಏರ್ಪಡಿಸಿತ್ತು. ಶಿಬಿರಕ್ಕೆ ಹೊಸಕೋಟೆ, ದೊಡ್ಡಬಳ್ಳಾಪುರ, ಬೆಂಗಳೂರು ನಗರ ಸಮಿತಿಯಿಂದ ಒಟ್ಟು 38 ಪ್ರತಿನಿಧಿಗಳು ಹಾಗೂ ಮೈಸೂರಿನಿಂದ ಇಬ್ಬರು ವೀಕ್ಷಕರು ಆಗಮಿಸಿದ್ದರು.

ಆರಂಭದ ದಿನ (ಜುಲೈ 31) ನಗರ ಸಮಿತಿ ಕಾರ್ಯದರ್ಶಿ ಕಾಂ| ಮೋಹನ್ ಕಾರ್ಯಕರ್ತರನ್ನು ಸ್ವಾಗತಿಸುತ್ತಾ ಪ್ರತಿಭಟನೆಯ ಹಕ್ಕುಗಳನ್ನು, ಮಾತನಾಡುವ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿರುವ ಈ ತುರ್ತು ಸಮಯದಲ್ಲಿ ವಿದ್ಯಾರ್ಥಿಗಳು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು, ಈ ಹಿನ್ನೆಲೆಯಲ್ಲಿ ಶಿಬಿರದ ಅಗತ್ಯತೆಯನ್ನು ವಿವರಿಸಿದರು.

ಕಾಂ| ಎಂ. ಕೆ. ಭಟ್ ಅವರು ಮಾತನಾಡುತ್ತ, ವಿದ್ಯಾರ್ಥಿಗಳು 'ರಸ್ತೆ ರಾಜಕೀಯ'ಗಳನ್ನು ಬಿಟ್ಟು ಬದಲೀ ಧೋರಣೆಗಳುಳ್ಳ ದುಡಿಯುವ ವರ್ಗದ ಸರ್ಕಾರಕ್ಕಾಗಿ ಹೋರಾಟ ಮಾಡುವದು ಅನಿವಾರ್ಯವಾಗಿದೆ ಎಂದು ಹೇಳಿ, ಇಂದಿನ ಪ್ರಸ್ತುತ ರಾಜಕೀಯ ವ್ಯವಸ್ಥೆ ಬದಲಾಗದೆ ವಿದ್ಯಾರ್ಥಿಗಳಿಗೂ ವಿಮೋಚನೆಯಿಲ್ಲ ಎಂದು; ಇಂದಿನ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ವಿವರಿಸಿದರು.

ಮಧ್ಯಾಹ್ನ 3 ಘಂಟೆಗೆ ಪ್ರಾರಂಭವಾದ ಎರಡನೆ ಗೋಷ್ಠಿಯಲ್ಲಿ ಕಾಂ| ಪಿ ರಾಮಚಂದ್ರರಾವ್‌ರವರು ಮಾತನಾಡುತ್ತಾ, ಎಸ್. ಎಫ್. ಐ. ನ ಧೋರಣೆಗಳಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಕುರಿತು ಮಾತನಾಡಿದರು.

ಎರಡನೆಯ ದಿನದ ಗೋಷ್ಠಿಯನ್ನು ಉದ್ದೇಶಿಸಿ ಕಾಂ| ಆರಾಧ್ಯ ಮಾತನಾಡಿದರು. ಅವರು ಎಸ್. ಎಫ್. ಐ. ನ ಸಂಘಟನೆ ಮತ್ತು ಶಿಕ್ಷಣ ಪದ್ಧತಿಯನ್ನು ವಿಶ್ಲೇಷಿಸಿದರು.

ನಾಲ್ಕನೇ ಗೋಷ್ಠಿಯಲ್ಲಿ ಕಾಂ| ಆರ್. ಜಯಕುಮಾರ್‌ರ ಗೈರುಹಾಜರಿಯಲ್ಲಿ ಅವರ ಪ್ರಬಂಧ ಮಂಡಿಸಲಾಯಿತು.

ನಂತರ ನಡೆದ ಸಭೆಯಲ್ಲಿ 11 ಜನ ಸದಸ್ಯರ ಮತ್ತು ಮೂವರು ಸಂಚಾಲಕರುಳ್ಳ ಜಿಲ್ಲಾ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಂಚಾಲಕರಾಗಿ ಕಾಂ| ಎಸ್. ರಾಜಣ್ಣ ಸಹಸಂಚಾಲಕರಾಗಿ ಕಾಂ| ಚಂದ್ರತೇಜಸ್ವಿ ಮತ್ತು ಕಾಂ| ಶಿವಶಂಕರ್‌ರವರನ್ನು ಆಯ್ಕೆಮಾಡಲಾಯಿತು.

ನಗರ ಸಮಿತಿಯ ಬೆಂಬಲ :

ಬೆಂಗಳೂರಿನಲ್ಲಿರುವ ಬಿ. ಸಿ. ಎಂ. ವಿದ್ಯಾರ್ಥಿ ನಿಲಯಗಳಲ್ಲಿ ಕ್ಯಾರಿಓವ್ಹರ್ ಪಡೆದ ವಿದ್ಯಾರ್ಥಿಗಳಿಗೆ ಮರುಪ್ರವೇಶ ನಿರಾಕರಿಸಿರುವುದನ್ನು ಬೆಂಗಳೂರುನಗರ ಸಮಿತಿ ಖಂಡಿಸಿದೆ. ಈ ಕೂಡಲೇ ಮರುಪ್ರವೇಶ ಒದಗಿಸಬೇಕೆಂದು ಒತ್ತಾಯಿಸಿದೆ.

ಚುನಾವಣೆಗೆ ಒತ್ತಾಯ

ನಗರದ ಹಲವಾರು ಕಾಲೇಜುಗಳ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ರದ್ದು ಪಡಿಸುವ ಕ್ರಮವನ್ನು ನಗರ ಸಮಿತಿ ಖಂಡಿಸಿದೆ. ಎಲ್ಲಾ ಶಾಲಾ-ಕಾಲೇಜುಗಳ ವಿಧ್ಯಾರ್ಥಿ ಸಂಘಗಳಿಗೆ ಕೂಡಲೇ ಪ್ರಜಾಪ್ರಭುತ್ವ ರೀತ್ಯ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯಿಸಿದೆ.

ಕುಂದಾಪುರ :

2-8-82 ರಂದು ಎಸ್.ಎಫ್.ಐ. ಟೌನ್ ಸಮಿತಿಯ ಸಭೆ ನಡೆಯಿತು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ| ಜಯಕುಮಾರ್ ಹಾಜರಿದ್ದು ಮಾರ್ಗದರ್ಶನ ನೀಡಿದರು. ಸಭೆ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿದೆ.

ಸ್ಥಳೀಯ ಭಂಡಾರ್ಕರ್ಸ್ ಕಾಲೇಜಿನಲ್ಲಿ ವಿಧ್ಯಾರ್ಥಿ ಸಂಘಕ್ಕೆ ಚುನಾವಣೆ ನಡೆಸದಿರುವುದನ್ನು ಖಂಡಿಸಿ, ಕೂಡಲೇ ಚುನಾವಣೆ ನಡೆಸಬೇಕೆಂದು ಒತ್ತಾಯಿಸಲಾಯಿತು.

ಮಂಗಳೂರು ವಿ. ವಿ. ಜಾರಿಗೊಳಿಸಿರುವ ಎಂ. ಆರ್. ಸ್ಕೀಂನಲ್ಲಿರುವ ಕೆಲವು ಲೋಪದೋಷಗಳನ್ನು ಸರಿಪಡಿಸಬೇಕೆಂದು ಒತ್ತಾಯಿಸಲಾಯಿತು.

ಸ್ಥಳೀಯ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಕಟ್ಟಡವು ಇಲ್ಲದಿದ್ದು, ಹೆಚ್ಚಿನ ಕಟ್ಟಡ ಸೌಲಭ್ಯ ಒದಗಿಸಬೇಕೆಂದು ಸಂಬಂಧಪಟ್ಟವರನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಗಂಗೊಳ್ಳಿ ಬೈಂದೂರುಗಳ ನಡುವೆ ಹಲವಾರು ಜೂನಿಯರ್ ಕಾಲೇಜುಗಳಿದ್ದರೂ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗಾಗುವ ಅನಾನುಕೂಲತೆಯನ್ನು ಸಭೆ ಗಂಭೀರವಾಗಿ ಪರಿಗಣಿಸಿತು. ಈ ಪ್ರದೇಶದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಯಿತು.

ನವೆಂಬರ್ 28, 29 ರಂದು ದ. ಕ. ಜಿಲ್ಲಾ ಮೂರನೇ ಸಮ್ಮೇಳನವನ್ನು ಕುಂದಾಪುರದಲ್ಲಿ ನಡೆಸಲು ಜಿಲ್ಲಾ ಸಮಿತಿ ಕೈಗೊಂಡ ನಿರ್ಣಯವನ್ನು ಸಭೆ ಸ್ವಾಗತಿಸಿ, ಸಿದ್ಧತೆಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಕುಂದಾಪುರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆದ ಭೀಕರ ನೆರೆ ದುರಂತದ ಬಗ್ಗೆ ಕಳವಳ ವ್ಯಕ್ತಪಡಿಸಿ, ಸಂತ್ರಸ್ತರಿಗೆ ಸಭೆ ಸಹಾನುಭೂತಿ ವ್ಯಕ್ತಪಡಿಸಿತು. ನೆರೆ ಸಂತ್ರಸ್ತರಿಗೆ ಗರಿಷ್ಠ ಸಹಾಯವನ್ನು ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಯಿತು.

ರಾಜಧಾನಿಯಲ್ಲಿ ಮಹಿಳೆಯರ ಕೂಗು

ವರದಕ್ಷಿಣೆ ಪಿಡುಗು ಕೊನೆಗೊಳ್ಳಬೇಕು

ಸಮಾಜದಲ್ಲಿ ಗೌರವಪೂರ್ಣ ಸ್ಥಾನಕ್ಕಾಗಿ ಮಹಿಳೆಯರ ಸತ್ವಯುತ ಹೋರಾಟ ಹಾಗೂ ಈ ಹೋರಾಟಕ್ಕೆ ಇತರ ಜನ ವಿಭಾಗಗಳ ಸಂಪೂರ್ಣ ಬೆಂಬಲದ ವಿಶಿಷ್ಟ ನಿದರ್ಶನವೊಂದು ಆಗಸ್ಟ್ 3ರಂದು ಹೊಸ ದಿಲ್ಲಿಯಲ್ಲಿ ಕಂಡು ಬಂತು. ವಿವಿಧ ಸಾಮೂಹಿಕ ಸಂಘಟನೆಗಳಿಗೆ ಸೇರಿದ ಮಹಿಳೆಯರು, ವಿಶೇಷವಾಗಿ ಯುವತಿಯರು, ವಿದ್ಯಾರ್ಥಿಗಳು, ಪುರುಷರು ಹೆಗಲಿಗೆ ಹೆಗಲು ಕೊಟ್ಟು ಜಂತರ್ ಮಂತರ್‌ನಿಂದ ಬೋಟ್ ಕ್ಲಬ್‌ನವರೆಗೆ ಹೊಸದಿಲ್ಲಿಯ ರಸ್ತೆಗಳಲ್ಲಿ ಬೃಹತ್ ಪ್ರದರ್ಶನ ನಡೆಸಿದರು.

ದಿಲ್ಲಿಯಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ಒಂದಾದಮೇಲೊಂದರಂತೆ ನಡೆದ ಹಲವು ನೂತನ ವಧುಗಳ ಜೀವಂತ ದಹನ, ವಿವಾಹಿತ ನವಯುವತಿಯರ ಕೊಲೆಗಳಿಂದ ರೊಚ್ಚಿಗೆದ್ದ ಮಹಿಳೆಯರ ಹಲವು ಸಂಘಟನೆಗಳು ಜುಲೈ ಮೊದಲ ವಾರದಲ್ಲಿ ಸಭೆ ಸೇರಿ 'ದಹೇಜ್ ವಿರೋಧೀ ಚೇತನಾ ಮಂಚ್' (ವರದಕ್ಷಿಣೆ ವಿರೋಧೀ ಜಾಗೃತಿ ವೇದಿಕೆ) ಎಂಬ ರಾಜಕೀಯೇತರ ವೇದಿಕೆ ಆರಂಭಿಸಲು ನಿರ್ಧರಿಸಿದರು. ಈ ವೇದಿಕೆಯ ಕರೆಯ ಮೇರೆಗೆ ಮೇಲೆ ಹೇಳಿದ ಪ್ರದರ್ಶನ ನಡೆಯಿತು. ಗೃಹಿಣಿಯರು, ದುಡಿಯುವ ಮಹಿಳೆಯರು, ವಿದ್ಯಾರ್ಥಿನಿಯರು, ಅಧ್ಯಾಪಕರು ಹಾಗೂ ಇತರ ವೃತ್ತಿಯ ಮಹಿಳೆಯರು ಭಾರೀ ಸಂಖ್ಯೆಯಲ್ಲಿ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಅವರು ಘೋಷಣೆ ಕೂಗುತ್ತಿದ್ದ ರೀತಿಯಿಂದಲೇ ಸಮಾನತೆಗಾಗಿ ಹೋರಾಟದ ಅವರ ದೃಢನಿರ್ಧಾರ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಈ ಪ್ರದರ್ಶನದ ಮೊದಲು ದಿಲ್ಲಿಯಾದ್ಯಂತ ಹಾಗೂ ಘಾಜಿಯಾಬಾದ್‌ನಲ್ಲಿ ಈ ಬಗ್ಗೆ ಸಭೆ, ಕರಪತ್ರ, ಪೋಸ್ಟರ್ ಇತ್ಯಾದಿಗಳ ಮೂಲಕ ವ್ಯಾಪಕ ಪ್ರಚಾರ ಕಾರ್ಯ ನಡೆದಿತ್ತು.

~~~~

ಪಶ್ಚಿಮ ಬಂಗಾಳ

ಜುಲೈ ೧೯-ಸಾಮೂಹಿಕ ಚಳುವಳಿಯಲ್ಲೊಂದು ಮೈಲಿಗಲ್ಲು

ಪಶ್ಚಿಮ ಬಂಗಾಳದ ಸುಮಾರು ನಲ್ವತ್ತು ಲಕ್ಷ ಕೃಷಿಕಾರ್ಮಿಕರಲ್ಲಿ ಪ್ರತಿಯೊಬ್ಬನೂ ಈ ಜುಲೈ 19ರಂದು 24 ಗಂಟೆಗಳ ಮುಷ್ಕರ ನಡೆಸಿ ಈ ದಿನವನ್ನು ಪಶ್ಚಿಮ ಬಂಗಾಳದ ಸಾಮೂಹಿಕ ಆಂದೋಲಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಮಾಡಿದ್ದಾರೆ. ಈ ಮುಷ್ಕರದ ಏಕೈಕ ಬೇಡಿಕೆಯೆಂದರೆ ಎಡರಂಗ ಸರ್ಕಾರ ನಿರ್ಧರಿಸಿದ ರೂ. 9.58 ಕನಿಷ್ಟ ಕೂಲಿಯನ್ನು ಪರಿಪಾಲಿಸಬೇಕು ಎಂಬುದು. ಈ ಬೇಡಿಕೆಯನ್ನು ಈಡೇರಿಸಿಕೊಳ್ಳಬೇಕಾದರೆ ಈ ಕೃಷಿ ಕಾರ್ಮಿಕರು ವರ್ಷಾನುಗಟ್ಟಲೆ ಹೋರಾಡಬೇಕಾಗಿತ್ತು. ಆದರೆ ಈಗ ಜಮೀನ್ದಾರರು ಹಾಗೂ ಅವರ ಕಾಂಗ್ರೆಸ್ ಪೋಷಕರು ಈ ಕನಿಷ್ಟ ಕೂಲಿಯ ನಿರ್ಧಾರವನ್ನು ಮುರಿಯುತ್ತಿದ್ದಾರೆ. ಇದರ ವಿರುದ್ಧವೇ ಈ ಮುಷ್ಕರ.

ಈ ಮುಷ್ಕರದ ಒಂದು ವಿಶೇಷತೆಯೆಂದರೆ ಗ್ರಾಮಾಂತರದ ಎಲ್ಲಾ ಜನ ವಿಭಾಗಗಳ ಬಡವರು, ಹಾಗೂ ರೈತಾಪಿ ವರ್ಗದ ಎಲ್ಲಾ ವಿಭಾಗಗಳವರೂ ಇದರಲ್ಲಿ ಭಾಗವಹಿಸಿದ್ದರು. ಹಲವೆಡೆ ವಿಶೇಷವಾಗಿ ದಕ್ಷಿಣ ಭಾಗದಲ್ಲಿ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಹಾಗೂ ಕಾರ್ಮಿಕರ ಸಾಮೂಹಿಕ ಸಂಘಟನೆಗಳು ಸೌಹಾರ್ದ ಪ್ರದರ್ಶನ ನಡೆಸಿದರು.

ಜಮೀನ್ದಾರರು ಹಾಗೂ ಕಾಂಗ್ರೆಸ್‌ನ ಗೂಂಡಾಗಳು ಕೃಷಿ ಕಾರ್ಮಿಕರ ಮೇಲೆ ಹಲ್ಲೆ ನಡೆಸಿ ಮುಷ್ಕರ ವಿಫಲಗೊಳಿಸಲು ಯತ್ನಿಸಿದರೂ ಅವರ ಯತ್ನ ಫಲಿಸಲಿಲ್ಲ.

ಭಾರತ ಹಾಗೂ ವಿದೇಶದ ಗುತ್ತೇದಾರಿಗಳು, ಭೂಮಾಲೀಕರು ಹಾಗೂ ದೊಡ್ಡ ವ್ಯಾಪಾರಸ್ಥರು ಗ್ರಾಮಾಂತರದಲ್ಲಿ ಹೆಚ್ಚೆಚ್ಚು ಕೊಳ್ಳೆ ಹೊಡೆಯುತ್ತಿರುವುದರ ಪರಿಣಾಮವಾಗಿ ಪಶ್ಚಿಮ ಬಂಗಾಳದಲ್ಲಿ ಹೆಚ್ಚೆಚ್ಚು ರೈತರು ಕೃಷಿ ಕಾರ್ಮಿಕರಾಗುತ್ತಿದ್ದಾರೆ. ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ಹಾಗೂ ನಿರುದ್ಯೋಗದಿಂದ ಅವರ ಬವಣೆ ಇನ್ನಷ್ಟು ಹೇಳತೀರದಂತಾಗಿಬಿಟ್ಟಿದೆ. ಈ ಕೃಷಿ ಕಾರ್ಮಿಕರು ಈಗ ಎಡರಂಗ ಸರ್ಕಾರದಿಂದ ಸ್ಫೂರ್ತಿ ಪಡೆದು ತಮ್ಮ ದುಸ್ಥಿತಿಯ ವಿರುದ್ಧ ಸಿಡಿದೆದ್ದಿದ್ದಾರೆ. ಹೋರಾಟ ಆರಂಭಿಸಿದ್ದಾರೆ. ಇದರಲ್ಲಿ ರೈತರ ಬೆಂಬಲ ಇವರಿಗಿದೆ. ಯಾಕೆಂದರೆ ಸುಯೋಗ್ಯ ಬೆಲೆ, ಸುಲಭದಲ್ಲಿ ಸಾಲ, ಮಾರಾಟ ವ್ಯವಸ್ಥೆ ಇತ್ಯಾದಿಗಳಿಗಾಗಿ ರೈತರು ನಡೆಸಿದ ಹೋರಾಟಗಳಿಗೆ ಕೃಷಿ ಕಾರ್ಮಿಕರೂ ಸಂಪೂರ್ಣ ಬೆಂಬಲ ಕೊಟ್ಟಿದ್ದರು.

●

ರೈತರ ಸಮಸ್ಯೆಗಳನ್ನು ಕುರಿತು

ಎರಡೂ ಕಿಸಾನ್ ಸಭೆಗಳ ಪ್ರತಿನಿಧಿಗಳ ವಿಚಾರ ವಿನಿಮಯ

ಅಖಿಲ ಭಾರತ ಕಿಸಾನ್ ಸಭಾ (12 ಬಿ., ಫಿರೋಜ್‌ಶಾ ರೋಡ್)ದ ಕಾಂ| ಬಿನಯ್ ಕೃಷ್ಣ ಚೌಧುರಿ ನೇತೃತ್ವದ ಐವರು ಸಂಗಾತಿಗಳ ತಂಡ ಹಾಗೂ ಅಖಿಲ ಭಾರತ ಕಿಸಾನ್ ಸಭಾ (16. ಡಿ, ಫಿರೋಜ್ ಶಾ ರೋಡ್)ದ ಕಾಂ| ಝುಡ್.ಎ. ಅಹ್ಮದ್ ನೇತೃತ್ವದ ಐವರು ಸಂಗಾತಿಗಳ ತಂಡ ಪರಸ್ಪರ ಭೇಟಿಯಾಗಿ ದೇಶದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

ಭೂಸುಧಾರಣೆಯ ಬಗ್ಗೆ ಉದ್ದುದ್ದಾ ಮಾತನಾಡಿದರೂ ಆಳುವ ವರ್ಗಗಳು ಹಾಗೂ ಅವುಗಳ ಪಕ್ಷಗಳು ಮಾಡಿದ್ದು ಏನೂ ಇಲ್ಲ. ಈ ಬಗ್ಗೆ ಪಶ್ಚಿಮ ಬಂಗಾಳದ ಹೊಸ ಶಾಸನ ಹಳೆಯದರಲ್ಲಿದ್ದ ಕುಂದುಕೊರತೆಗಳನ್ನು ನಿವಾರಿಸಿದೆಯೆಂದು ಅಭಿಪ್ರಾಯಪಟ್ಟ ಪ್ರತಿನಿಧಿಗಳು ಅದಕ್ಕೆ ತಡವಿಲ್ಲದೆ ರಾಷ್ಟ್ರಪತಿಯ ಒಪ್ಪಿಗೆ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಪಶ್ಚಿಮ ಬಂಗಾಳ ಶಾಸನದ ಮಾದರಿಯಲ್ಲಿ ಭೂಸುಧಾರಣಾ ಶಾಸನಗಳ ಪರಿಷ್ಕರಣ ಹಾಗೂ ಭೂದಾಖಲೆಗಳ ಬಗ್ಗೆ ರಾಷ್ಟ್ರವ್ಯಾಪೀ ಆಂದೋಲನ ನಡೆಸಬೇಕೆಂದು ಪ್ರತಿನಿಧಿಗಳು ನಿರ್ಧರಿಸಿದರು.

ಕಬ್ಬು, ಹತ್ತಿ, ಸೆಣಬು ಇತ್ಯಾದಿ ವ್ಯಾಪಾರೀ ಬೆಳೆಗಳ ಬೆಲೆಯಲ್ಲಿನ ಕುಸಿತದ ಬಗ್ಗೆ ಚರ್ಚಿಸಿದ ಪ್ರತಿನಿಧಿಗಳು ಈ ರೈತರ ಹಿತಾಸಕ್ತಿ ಕಾಪಾಡುವ ಕ್ರಮಗಳ ಬಗ್ಗೆ ಸಮಾಲೋಚಿಸಲು ದೆಹಲಿಯಲ್ಲಿ ಕಬ್ಬು ಹಾಗೂ ಹತ್ತಿ ಬೆಳೆಗಾರರ ಸಮಾವೇಶ, ಅದೇ ರೀತಿ ಕಲ್ಕತ್ತೆಯಲ್ಲಿ ಸೆಣಬು ಬೆಳೆಗಾರರ ಹಾಗೂ ಆಂಧ್ರ ಪ್ರದೇಶಗಳಲ್ಲಿ ತಂಬಾಕು ಬೆಳೆಗಾರರ ಸಮಾವೇಶ ಸಂಘಟಿಸಲು ನಿರ್ಧರಿಸಿದರು. ಅಲ್ಲದೆ ಪ್ರತಿನಿಧಿಗಳು ತಮ್ಮ ಸಂಘಟನೆಗಳ ಎಲ್ಲಾ ಘಟಕಗಳು ಅಕ್ಟೋಬರ್ 4ರಂದು ಆರು ಪಕ್ಷಗಳು ನಡೆಸಲಿರುವ ಯುದ್ಧ ವಿರೋಧೀ ಪ್ರದರ್ಶನದಲ್ಲಿ ಭಾಗವಹಿಸಬೇಕೆಂದು ಕರೆ ನೀಡಲು ನಿರ್ಧರಿಸಿದರು. ರೈತರ ಆಂದೋಲನವನ್ನು ಬಲಪಡಿಸಲು ಈ ರೀತಿ ಆಗಾಗ ಅಭಿಪ್ರಾಯ ವಿನಿಮಯ ಮುಂದೆಯೂ ನಡೆಸುತ್ತಿರಬೇಕೆಂದೂ ಅವರು ನಿರ್ಧರಿಸಿದರು.

●

ನೆರೆಹೊರೆ

ಪಂಜಾಬ್‌ನಲ್ಲಿ ಕೋಮು ಪರಿಸ್ಥಿತಿ

ಅಕಾಲೀ ದಳದ ಚಳುವಳಿ ಅಪಾಯಕಾರಿ

ಶಿರೋಮಣಿ ಅಕಾಲೀದಳ ಆಗಸ್ಟ್ 4ರಂದು ಒಂದು ಚಳುವಳಿ ಆರಂಭಿಸಲಿದ್ದು ಅದರ 47 ಅಂಶಗಳ ಕಾರ್ಯಕ್ರಮದಲ್ಲಿ ಭಿಂದರನ್ ವಾಲೇಯ ಹಿಂಬಾಲಕರನ್ನು ಬಿಡುಗಡೆ ಮಾಡಬೇಕೆಂಬ ಹಾಗೂ ಪ್ರತ್ಯೇಕತಾವಾದಿ ಆನಂದಪುರ ನಿಲುವಳಿಯನ್ನು ಜ್ಯಾರಿಗೊಳಿಸಬೇಕೆಂಬ ಬೇಡಿಕೆಗಳನ್ನು ಸೇರಿಸಲಾಗಿದೆ. ಅಕಾಲೀ ದಳದ ಇನ್ನೊಂದು ಗುಂಪಿನ ನಾಯಕರಾದ ತಳವಂಡಿಯವರು ಈ ಬಗ್ಗೆ ಕಳೆದ ಏಪ್ರಿಲ್‌ನಿಂದಲೇ ಚಳುವಳಿ ಆರಂಭಿಸಿದ್ದಾರೆ. ಈ ರೀತಿ ಅಕಾಲೀ ದಳದ ಪ್ರಜಾಪ್ರಭುತ್ವವಾದೀ ವೇದಿಕೆಯಲ್ಲಿಭಿಂದರನ್‌ವಾಲೇಯಂತಹ ತೀವ್ರವಾದಿಗಳಿಗೂ ಸ್ಥಾನ ಸಿಕ್ಕಂತಾಗಿ ಚಳುವಳಿ ಕೋಮುವಾದೀ ತಿರುವು ಪಡೆಯುವ ಅಪಾಯವಿದೆ.

ಅಕಾಲೀ ದಳ ರಾಜ್ಯದ ಒಂದು ಪ್ರಮುಖ ರಾಜಕೀಯ ಪಕ್ಷ. ಅಲ್ಲದೆ ಸಿಖ್ ಧಾರ್ಮಿಕ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷ. ಈ ದೃಷ್ಟಿಯಲ್ಲಿ ಅವರದ್ದು ಹಲವು ನ್ಯಾಯಪೂರ್ಣ ಬೇಡಿಕೆಗಳಿವೆ. ಇವುಗಳಿಗೆ ರಾಜ್ಯದ ಎಡಪಕ್ಷಗಳು ಹಾಗೂ ಇತರ ಪ್ರಜಾಪ್ರಭುತ್ವವಾದೀ ವಿಭಾಗಗಳು ಬೆಂಬಲ ಕೊಡುತ್ತಾ ಬಂದಿವೆ. ಈ ಬೇಡಿಕೆಗಳು ಈಡೇರಬೇಕಾದರೆ ಸಂಯುಕ್ತ ಹೋರಾಟಗಳು ಅಗತ್ಯ. ಆದರೆ ಅಕಾಲೀದಳ ಈ ರೀತಿಯ ನಿಲುವು ತಳೆಯುವ ಬದಲು ಕೋಮುವಾದೀ ತೀವ್ರವಾದಿಗಳೊಂದಿಗೆ ಸೇರಿಕೊಂಡಿದೆ. ಇದರಿಂದಾಗಿ ಕೋಮುವಾದೀ ಬೇಡಿಕೆಗಳು ಪ್ರಾಮುಖ್ಯತೆ ಪಡೆದು ಅಸಂಖ್ಯಾತ ಪಂಜಾಬೀ ರೈತರ ಹಿತಾಸಕ್ತಿಗೆ ಸಂಬಂಧಿಸಿದ ಕಾಲುವೆ ನೀರಿನ ಪ್ರಶ್ನೆ ಇತ್ಯಾದಿ ಹಿಂದೆಗೆಯಲಾಗಿದೆ ಅಲ್ಲದೆ ಹಿಂದೂ ಕೋಮುವಾದಿಗಳಿಗೆ, ಆರ್. ಎಸ್. ಎಸ್. ಗೆ ಕೋಮುದ್ವೇಷ ಮತ್ತಷ್ಟು ಹರಡಿಸಲೀದು ಅವಕಾಶವಾದಂತಾಗಿದೆ. ಈ ಸಂದರ್ಭದಲ್ಲಿ ಸಿ. ಪಿ. ಐ. (ಎಂ) ನ ಪಂಜಾಬ್ ರಾಜ್ಯ ಸಮಿತಿ ಸಿಖ್ ಹಾಗೂ ಹಿಂದೂ ಈ ಎರಡೂ ಕೋಮುಗಳ ತೀವ್ರವಾದಿಗಳ ವಿರುದ್ಧ ಆಂದೋಳನವನ್ನೂ ಮುಂದುವರಿಸಿ ಕೋಮು ಸೌಹಾರ್ದತೆಗೆ ಪ್ರಯತ್ನಿಸಲು ನಿರ್ಧರಿಸಿದೆ.

●

ಎಡ ಪ್ರಜಾಪ್ರಭುತ್ವ ರಂಗದ ಕರೆಯಂತೆ

ಕೇರಳದಲ್ಲಿ ಅಸ್ಪೃಶ್ಯತಾ ವಿರೋಧೀ ದಿನಾಚರಣೆ

ಅಲೆಪ್ಪಿ ಜಿಲ್ಲೆಯ ಮಾವೆಳ್ಳಿಕಾರಾದ ಚೆನ್ನಿತಾಲಾದಲ್ಲಿ ಇನ್ನೂ ಅಸ್ಪೃಶ್ಯತೆ ಜೀವಂತವಾಗಿದೆ. ಅಲ್ಲದೆ ಇಲ್ಲಿಯ ಸವರ್ಣೀಯರು ಕೃಷಿ ಕಾರ್ಮಿಕರನ್ನು ಈಗಲೂ ಜೀತದಾಳುಗಳೆಂದೇ ಪರಿಗಣಿಸುತ್ತಿದ್ದಾರೆ ಆದರೆ ಶಿಕ್ಷಣದ ಲಾಭ ಪಡೆದ ಹರಿಜನರ ಹೊಸ ಪೀಳಿಗೆ ನಾಗರಿಕರಾಗಿ ತಮ್ಮ ಹಕ್ಕುಗಳ ಪ್ರಜ್ಞೆ ಹೊಂದಿರುವುದರಿಂದಾಗಿ ಈ ಊಳಿಗಮಾನ್ಯ ದುಷ್ಟ ಮೌಲ್ಯಗಳನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದ್ದಾರೆ. ಇದರ ಪರಿಣಾಮವಾಗಿಯೇ ಇತ್ತೀಚೆಗೆ ಆರ್. ಎಸ್. ಎಸ್. ಕಾರ್ಯಕರ್ತರು ಹರಿಜನರ ಮೇಲೆ ದಾಳಿ ನಡೆಸಿ ಅದರಿಂದಾಗಿ ನಡೆದ ಘರ್ಷಣೆಯಲ್ಲಿ ಇಬ್ಬರು ಆರ್. ಎಸ್. ಎಸ್. ಕಾರ್ಯಕರ್ತರು ಜೀವ ಕಳೆದು ಕೊಂಡರು. ಈಗ ಆರ್. ಎಸ್. ಎಸ್. ಹಾಗೂ ಸವರ್ಣೀಯರು ಮತ್ತು ಪೋಲೀಸರು ಎಲ್ಲರೂ ಸೇರಿಕೊಂಡು ಚೆನ್ನಿತಾಲಾದಲ್ಲಿ ಭಯೋತ್ಪಾದನೆ ನಡೆಸುತ್ತಿದ್ದಾರೆ. ಹರಿಜನ ಹೆಂಗಸರು, ಮಕ್ಕಳು ಸದಾ ಭಯದ ನೆರಳಲ್ಲಿ ಜೀವಿಸುತ್ತಿದ್ದಾರೆ. ಕೇರಳ ಪ್ರಗತಿಶೀಲ ಲೇಖಕರ ಸಂಘದ ಎಂಟು ಮಂದಿ ಲೇಖಕರ ತಂಡವೊಂದು ಕಣ್ಣಾರೆ ಕಂಡ ಅಂಶವಿದು.

ಈ ರೀತಿ ರಾಜ್ಯದಾದ್ಯಂತ ನಡೆಯುತ್ತಿರುವ ಹರಿಜನ ವಿರೋಧೀ ಹಲ್ಲೆಗಳ ವಿರುದ್ಧ ಎಡ ಪ್ರಜಾಪ್ರಭುತ್ವರಂಗ ಜುಲೈ 19ರಂದು 'ಅಸ್ಪೃಶ್ಯತಾ ವಿರೋಧೀ ದಿನ' ವಾಗಿ ಆಚರಿಸಲು ಕರೆ ಕೊಟ್ಟಿತ್ತು. ಈ ದಿನದಂದು ಚೆನ್ನಿತಾಲಾವೂ ಸೇರಿದಂತೆ ಎಲ್ಲ ಕಡೆ ಮೆರವಣಿಗೆ, ಪ್ರದರ್ಶನ ಹಾಗೂ ಸಾರ್ವಜನಿಕ ಸಭೆಗಳು ನಡೆದವು. ಕೃಷಿ ಕಾರ್ಮಿಕರ ಸಂಘದ ಸದಸ್ಯರು ಈ ದಿನಾಚರಣೆಯಲ್ಲಿ ಪಾಲುಗೊಂಡರು.

○
~~~~

ಕರ್ನಾಟಕ ರಾಜ್ಯದಲ್ಲಿ

ರಾಜ್ಯಪಾಲ ಲತೀಫರ ಅನುಮತಿ, ಗೋವಿಂದ ನಾರಾಯಣ

ಸಿಮೆಂಟ್ ಹಗರಣದಲ್ಲಿ ಮಹಾರಾಷ್ಟ್ರದ ಮಾಜಿ ಮುಖ್ಯ ಮಂತ್ರಿ ಅಬ್ದುಲ್ ರಹಮಾನ್ ಅಂತುಳೆ ವಿರುದ್ಧ ಭ್ರಷ್ಟಾಚಾರ ಆರೋಪಗಳಲ್ಲಿ ಮೊಕದ್ದಮೆ ಹೂಡಲು ಅನುಮತಿ ನೀಡಿ ರಾಜ್ಯಪಾಲ ಲತೀಫರು ಎರಡು ಪ್ರತ್ಯೇಕ ಆಜ್ಞೆಗಳನ್ನು ನೀಡಿದ್ದಾರಂತೆ.

ತಾವು ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿದ್ದಾಗ ಇಂದಿರಾ ಪ್ರತಿಷ್ಠಾನದ ಹೆಸರಲ್ಲಿ ಕೋಟ್ಯಾವಧಿ ರೂಪಾಯಿ ಸಂಗ್ರಹಿಸಲು, ಸಿಮೆಂಟ್ ಪರ್ಮಿಟ್ ದುರುಪಯೋಗಪಡಿಸಿಕೊಂಡಿದ್ದಾರೆಂಬ ಆರೋಪ ಬೆಳಕು ಕಂಡ ಕೂಡಲೇ ಮೃಣಾಲಿನಿ ಗೋರೆ, ಪಿ. ಬಿ ಸಾವಂತ ಮತ್ತು ಕೈಲಾಸ ದೇಸಾಯಿಯವರು ಮುಂಬಯಿ ಹೈಕೋರ್ಟಿನಲ್ಲಿ ದಾವೆ ಹೂಡಿದಾಗ, ಈ ಆರೋಪ ಪುಷ್ಟೀಕರಿಸಲ್ಪಟ್ಟಿತ್ತು. ಆದರೆ ಒಬ್ಬ ಮುಖ್ಯ ಮಂತ್ರಿ ವಿರುದ್ಧ ದಾವೆ ಹೂಡಲು ರಾಜ್ಯಪಾಲರ ಅನುಮತಿ ಬೇಕೆಂದು ಮುಂಬಯಿ ಹೈಕೋರ್ಟ್ ನಿರ್ಣಯ ಕೊಟ್ಟಿತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟಿಗೆ ಮನವಿ ಮಾಡಲಾಗಿತ್ತು. ಆ ಮನವಿ ತಿರಸ್ಕರಿಸಲ್ಪಟ್ಟ ಕೂಡಲೇ ಸಚಿವ ಸಂಪುಟದೊಂದಿಗೆ ಸಮಾಲೋಚಿಸದೇ ಮೊಕದ್ದಮೆ ಹೂಡುವಂತೆ ಅನುಮತಿ ನೀಡಲು ರಾಜ್ಯಪಾಲರಿಗೆ ಅಧಿಕಾರವಿದೆಯೆಂದು ಸಾರಲ್ಪಟ್ಟಿದ್ದರಿಂದ ಈ ಅನುಮತಿ ನೀಡಲಾಗಿದೆ.

ಮಹಾರಾಷ್ಟ್ರ ರಾಜ್ಯಪಾಲರ ಈ ನಿರ್ಣಯ ಇಂದಿರಾ ಕಾಂಗ್ರೆಸ್ ವಲಯದಲ್ಲಿ ಗೊಂದಲ ಉಂಟುಮಾಡುವುದರಲ್ಲಿ ಸಂಶಯವಿಲ್ಲ. ಕರ್ನಾಟಕವನ್ನೊಳಗೊಂಡು ಕಾಂಗೈ ಆಳ್ವಿಕೆಯ ಪ್ರತಿಯೊಂದು ರಾಜ್ಯದಲ್ಲೂ ಮಂತ್ರಿಗಳ ಮೇಲೆ ಒಂದಿಲ್ಲೊಂದು ಗಂಭೀರ ಆರೋಪಗಳಿವೆ. ನ್ಯಾಯಾಂಗದ ನಿರ್ಣಯಗಳಿದ್ದರೂ ಇಂದಿರಾ ಗಾಂಧಿಯೇ ಎಲ್ಲ ಗವರ್ನರರನ್ನು ನೇಮಿಸಿರುವುದರಿಂದ, ಮಂತ್ರಿಗಳ ಮೇಲೆ ಖಟ್ಲೆ ಹಾಕುವ ಪ್ರಶ್ನೆ ರಾಜಕೀಯ ಪ್ರಶ್ನೆಯಾಗಿದೆ. ಹಾಗಿರುವಾಗ ಗವರ್ನರ್ ಲತೀಫರ ನಿರ್ಣಯ ರಾಜಕೀಯ ಗೊಂದಲ ಉಂಟುಮಾಡುತ್ತದೆ. 35 ವರ್ಷಗಳ ಕಾಂಗೈ ಆಳ್ವಿಕೆಯಲ್ಲಿ ಇಂಥ ಸಂದಿಗ್ಧ ಪರಿಸ್ಥಿತಿಯನ್ನೆದುರಿಸಬೇಕಾಗಿರುವುದು ಪ್ರಥಮ ಸಲ. ಆಗಸ್ಟ್ 4 ರಂದು ಮಹತ್ವದ ವಿಷಯ ಸ್ಫೋಟಗೊಳಿಸುವುದಾಗಿ ಮಾಜಿ ಮುಖ್ಯ ಮಂತ್ರಿ ಅಂತುಳೆ ಹೇಳಿದ್ದರು. ಅಂತುಳೆಯವರ ಆಟಂಬಾಂಬ್ ಯಾರನ್ನು ನಾಶಗೊಳಿಸುತ್ತದೆಂಬುದನ್ನು ನೋಡಬೇಕಾಗಿದೆ. ಗವರ್ನರ್ ಲತೀಫರ ನಿರ್ಣಯ ಕರ್ನಾಟಕ ರಾಜ್ಯಪಾಲ ಗೋವಿಂದ ನಾರಾಯಣರಿಗೆ ಸವಾಲಾಗಿದೆ. ಗುಂಡೆದೆಯ ಗೂಂಡೂರಾಯರನ್ನು ಆಹಾರ ಪೂರೈಕೆ ಮಂತ್ರಿ ಪಾಟೀಲರನ್ನೂ ಕೋರ್ಟಿಗೆಳೆಯಲು ಅನುಮತಿ ನೀಡುತ್ತಾರೋ ಹೇಗೆ? ಮಹಾರಾಷ್ಟ್ರ ಗವರ್ನರರ ನಿರ್ಣಯದಿಂದ ಗುಂಡೂರಾಯರೂ ಪಾಟೀಲರೂ ಕೊಡಗಟ್ಲೆ ಬೆವರು ಸುರಿಸಿದರೆಂದು ಸುದ್ದಿ, ಇದರ ಉಪಯೋಗ ಮಾಡಿಕೊಂಡು ಜನ ಜಾಗೃತಿಯನ್ನುಂಟು ಮಾಡಲು ವಿರೋಧಿ ಪಕ್ಷಗಳು ಮುಂದಾಗಲಿ.

ಮಂತ್ರಿ ವೀರೇಂದ್ರ ಪಾಟೀಲರಿಗೆ ಅರ್ಧ ಚಂದ್ರ ?

ತಮ್ಮ ಊರಾದ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯನ್ನು ಬಿಟ್ಟು, ಬಾಗಲಕೋಟೆಯಿಂದ ಲೋಕಸಭೆಗೆ ಆರಿಸಿಹೋಗಿ 1980ರಲ್ಲಿ ಇಂದಿರಾ ಮಂತ್ರಿಮಂಡಲದಲ್ಲಿ ಪೆಟ್ರೋಲಿಯಂ ಮಂತ್ರಿಯಾಗಿದ್ದು, ಈಗ ಬಂದರು, ಹಡಗು ಖಾತೆಯ ಮಂತ್ರಿಯಾಗಿರುವ ವೀರೇಂದ್ರ ಪಾಟೀಲರು ಮಂತ್ರಿ ಸ್ಥಾನ ಕಳೆದುಕೊಳ್ಳುತ್ತಾರೆಂಬ ದಟ್ಟವಾರ್ತೆ ಹಬ್ಬಿದೆ. ಇದಕ್ಕೆ ಕಾರಣ ? ಈಗಿನ ಲೋಕಸಭೆಯಲ್ಲಿ ಭಯಂಕರ ಗೊಂದಲವೆಬ್ಬಿಸಿರುವ ಕುವೊ ಸಂಸ್ಥೆಯೊಂದರೊಡನೆ ಪೆಟ್ರೋಲ್ ಆಮದಿಗಾಗಿ ಮಾಡಿಕೊಂಡ ವ್ಯವಹಾರ ಒಪ್ಪಂದ, ಅದರಿಂದ ಭಾರತ ದೇಶಕ್ಕಾದ ಅಪಾರ ನಷ್ಟ, ಒಪ್ಪಂದದ ಕಾಗದ ಪತ್ರಗಳೇ ಕಾಣೆಯಾಗುವಿಕೆ, ಈ ಪ್ರಕರಣ ವೀರೇಂದ್ರ ಪಾಟೀಲರನ್ನೇ ನುಂಗಲಿದೆಯಂತೆ. ಈ ಪ್ರಕರಣ ನಡೆದ ಕೆಲವೇ ತಿಂಗಳಲ್ಲಿ ಈ ಖಾತೆಯನ್ನು ವೀರೇಂದ್ರ ಪಾಟೀಲರಿಂದ ಕಸಿದುಕೊಳ್ಳಲಾಯಿತು. ವಿರೋಧಿ ಪಕ್ಷಗಳ ಸತತ ಪ್ರಯತ್ನದಿಂದ ಈ ಹಗರಣ ಬೆಳಕು ಕಂಡಾಗ, ಇಂದಿರಾ ಗಾಂಧಿ ಅದನ್ನು ಮುಚ್ಚಿಡಲು ಅಸಾಧ್ಯವಾದಾಗ ಎರಡುವರ್ಷಗಳಲ್ಲಿ "ನಾಪತ್ತೆ"ಯಾಗಿದ್ದ ಫ್ಯಾಲ್ "ಪತ್ತೆ"ಯಾಯಿತು ಎಲ್ಲಿ ? ಇಂದಿರಾಗಾಂಧಿಯ ಮಡಿಲಲ್ಲಿ. ಅಂತುಳೆಯ ಸಿಮೆಂಟ್ ಪ್ರಕರಣಕ್ಕಿಂತಲೂ ಭೀಕರವಾದ ಈ ಪ್ರಕರಣದ ಆಮೂಲಾಗ್ರ ಸುದ್ದಿ ವರ್ತಮಾನ ಪತ್ರಗಳಲ್ಲಿ ಪ್ರಕಟಿಸಲ್ಪಟ್ಟೀತೆಂಬ ಭೀತಿಯಿಂದ ಅಮೇರಿಕಕ್ಕೆ ಪ್ರಯಾಣ ಬೆಳೆಸುವ ಮುಂಚೆ ಇಂದಿರಾಗಾಂಧಿಯವರು ವೀರೇಂದ್ರ ಪಾಟೀಲರನ್ನು ಕರೆಸಿ, ಫೈಲನ್ನು ಅವರ ಕೈಯ್ಯಲ್ಲಿಟ್ಟು ಸಂಬಂಧಪಟ್ಟಲ್ಲೆಲ್ಲ ಸಹಿ ಹಾಕಬೇಕೆಂದು ಕೇಳಿಕೊಂಡರಂತೆ. ವೀರೇಂದ್ರಪಾಟೀಲರು ತಾನು ಹಿಂದಿನ ತಾರೀಖು ಹಾಕಿ ಸಹಿ ಮಾಡುವುದಿಲ್ಲೆಂದು ಹೇಳಿ ಫೈಲನ್ನು ಒಗೆದರಂತೆ. ಎಂಥ ಮಹಾಪಾಪ? ಬಾಗಲಕೋಟೆಗೆ ಚುನಾವಣಾ ಪ್ರಚಾರಕ್ಕೆ ಬಂದಾಗ ಸಾರ್ವಜನಿಕ ಸಭೆಯಲ್ಲಿ ಉಮೇದುವಾರರಾಗಿರುವ ವೀರೇಂದ್ರ ಪಾಟೀಲರನ್ನು ಜನರಿಗೆ ಪರಿಚಯ ಮಾಡಿಸದೆ "ಇಂದಿರಾಗೆ ಮತ, ಹಸ್ತಕ್ಕೆ ಮತ" ವೆಂದು ಹಸ್ತತೋರಿಸಿ ವೀರೇಂದ್ರರನ್ನು ಆರಿಸಿ (ಚಿಕ್ಕಮಗಳೂರು ಚುನಾವಣೆಯಲ್ಲಿ ಇಂದಿರಾರನ್ನು ವಿರೋಧಿಸಿದವರು) ಪೆಟ್ರೋಲ ಖಾತೆ ಮಂತ್ರಿಯನ್ನಾಗಿ ಮಾಡಿದ್ದು ಇಂದಿರಾಗಾಂಧಿ. ಕಾಣುವ ಹಣಕ್ಕಾಗಿ ಕಾಣದ ಕೈಗಳು ಫೈಲನ್ನು ನಾಪತ್ತೆ ಮಾಡಿವೆ. ಹಣ ಮತ್ತು ಕೈಗಳು ಇಂದಿರಾಗಾಂಧಿಯ ಆಪ್ತರು. ಹಾಗಿರುವಾಗ ಅಮ್ಮಾವ್ರು ಹೇಳಿದ್ದಲ್ಲಿ ಅಮ್ಮಾವ್ರ, ಹಸ್ತದಿಂದ ಪಟ್ಟಕ್ಕೇರಿದ ವೀರೇಂದ್ರರು, "ನಾನು ಹೇಳಿದ್ದಲ್ಲಿ ನೀನು ಸಹಿಹಾಕಬೇಕೆಂದು" ಹೇಳುವುದರಲ್ಲಿ ತಪ್ಪೇನಿದೆ. ಇಲ್ಲಿ ಗುಂಡೂರಾಯರು, ಅಲ್ಲಿ ಇಂದಿರಾಗಾಂಧಿ ಮಂತ್ರಿಮಂಡಲ ಪುನರ್ರಚಿಸುತ್ತಾರಂತೆ. ಇಲ್ಲಿ ಯಾರು ಒಳ ಸೇರುತ್ತಾರೆ ಅಲ್ಲಿ ಯಾರು ಹೊರ ಸಾಗುತ್ತಾರೆ ಕಾದು ನೋಡೋಣ. ವೀರೇಂದ್ರರು ಡಿಸ್‌ಮಿಸ್ ಆಗುತ್ತಾರೆಂದು ಸುದ್ದಿ. ವೀರೇಂದ್ರರು ನಿರ್ಗಮಿಸಬಹುದು. ಆದರೆ ಈ ವ್ಯವಹಾರದಿಂದ ನಷ್ಟವಾದ ರೂ. 9 ಕೋಟಿ ನಾವು, ನಾಗರೀಕರು ತುಂಬಬೇಕು. ಆದರೆ 2 ವರ್ಷ ಈ ಫೈಲು ಹೇಗೆ ಕಾಣೆಯಾಯಿತು. ಈಗ ಯಾವ ದಾರಿಯಲ್ಲಿ ಬಂದು ಬೆಳಕು ಕಂಡಿತು. ಯಾವ ಅಧಿಕಾರಿ ಇದಕ್ಕೆ ಕಾರಣ. ಇದರ ವಿಚಾರಣೆಯಾಗಬೇಕು. ತಪ್ಪಿತಸ್ಥ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಶಿಕ್ಷೆಯಾಗಬೇಕು. ಇದಕ್ಕಾಗಿ ಜನತೆ ವಿರೋಧಿಪಕ್ಷದೊಡನೆ ಸೇರಿ ಹೋರಾಟ ಮಾಡಬೇಕು.

ಶಿಕ್ಷೆಗಾಗಿ ಕಾಯುತ್ತಿರುವ 5221 ಕೈದಿಗಳು

ಭಾರತ ದೇಶದ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರನ್ನೊಳಗೊಂಡು ಬಹಳಷ್ಟುಪ್ರಮುಖರೆಲ್ಲ ಅಪರಾಧಿಗಳಿಗೆ ತ್ವರಿತ ನ್ಯಾಯ ನೀಡಬೇಕೆಂದು ಬುದ್ಧಿವಾದ ಹೇಳುವವರೇ. ಆದರೆ ದೇಶಕ್ಕೆ ಸ್ವಾತಂತ್ರ್ಯ ದೊರೆತು 35 ವರ್ಷಗಳಾದರೂ ಅಪ್ಪಿ ತಪ್ಪಿ ಪೋಲೀಸರ ಕೈಗೆ ಸಿಕ್ಕ ಜನರಿಗೆ ಜೀವಮಾನದ ಹೆಚ್ಚಿನಂಶವನ್ನು ನರಕದಂತಿರುವ ಜೈಲುಗಳಲ್ಲೇ ಕಳೆಯುವಂತಾಗಿದೆ. ಭಾರತ ದೇಶವನ್ನು ಗುಲಾಮಗಿರಿಯಲ್ಲಿಡುವ ದುರುದ್ದೇಶದಿಂದ ರಚಿಸಲ್ಪಟ್ಟ, ಇಂಡಿಯನ್ ಪಿನಲ್‌ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡುಗಳನ್ನು ಅವಲಂಬಿಸುತ್ತಿರುವ ಕಾಂಗ್ರೆಸ್ ಸರಕಾರ ಸ್ವಾತಂತ್ರ್ಯ ಪಡೆದ ಜನತೆಗೆ ತ್ವರಿತನ್ಯಾಯ ನೀಡಲು ಹೇಗೆ ಸಾಧ್ಯ. ರಷ್ಯಾ ಮತ್ತಿನ್ನಿತರ ದೇಶಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿ ಕ್ರಾಂತಿ ಮಾಡಿ ಹಳೆಯ ರಾಜಕೀಯ, ಆರ್ಥಿಕ, ಸಾಮಾಜಿಕ ಪದ್ಧತಿಗಳನ್ನು ಬದಲಾಯಿಸಿ ಹೊಸ ಸರಕಾರ ಸ್ಥಾಪಿಸಿದಾಗ ಹಳೇ ಕಾಯಿದೆ–ಕಾನೂನುಗಳನ್ನೆಲ್ಲ ಸಂಪೂರ್ಣ ರದ್ದು ಪಡಿಸಿ, ದುಡಿಯುವ ಜನತೆಗೆ ನ್ಯಾಯ ದೊರಕಿಸುವ ಹೊಸ ಕಾನೂನು – ಕಾಯಿದೆಗಳನ್ನು ರಚಿಸಿ, ಜಾರಿಯಲ್ಲಿ ತಂದಿರುವುದರಿಂದ, ಭಾರತ ದೇಶದಲ್ಲಿ ಇಂದು ಗುನ್ಹೆಗೊಳಗಾದ ಜನ ಸಂಕಷ್ಟ ಪಡುವಂತೆ ಅಲ್ಲಿಯ ಜನ ಅನ್ಯಾಯಕ್ಕೊಳಗಾಗುತ್ತಿಲ್ಲ. ಬ್ರಿಟಿಷರು ದೇಶ ಬಿಟ್ಟು ಹೋದರೂ, ಅವರು ರಚಿಸಿದ ಕಾಯಿದೆ–ಕಾನೂನುಗಳನ್ನೇ ಅವಲಂಬಿಸಿರುವ, ಅವರ ಆಡಳಿತ ಕ್ರಮವನ್ನೇ ಅನುಸರಿಸುತ್ತಿರುವ ಕಾಂಗ್ರೆಸ್ ಸರಕಾರದಲ್ಲಿ ತ್ವರಿತ ನ್ಯಾಯ ಪಡೆಯಲು ಅವಕಾಶವಿಲ್ಲ. ಆದ್ದರಿಂದಲೇ 5221 ಕೈದಿಗಳು ಅಲ್ಪ ಗುನ್ಹೆ ಮಾಡಿದ್ದರೂ ಕೂಡ ಹಲವಾರು ವರ್ಷ ವಿಚಾರಣೆಯಿಲ್ಲದೆ ಜೈಲುಗಳಲ್ಲಿ ಕೊಳೆಯುವಂತಾಗಿದೆ. ಲೋಕ ಸಭೆಯಲ್ಲಿ ಗೃಹ ಮಂತ್ರಿಗಳ ಹೇಳಿಕೆಯಂತೆ ನೂರಾರು ಕೈದಿಗಳು ನ್ಯಾಯಕಾಣದೇ ಕಾರಾಗೃಹದಲ್ಲೇ ಕೊನೆಯುಸಿರೆಳೆದರೆಂದೂ, ತಾವು ಶಿಕ್ಷೆ ಅನುಭವಿಸುವುದಕ್ಕಿಂತಲೂ ಹೆಚ್ಚು ಕಾಲ, ನ್ಯಾಯದ ದಾರಿ ನೋಡುತ್ತ ಜೈಲುವಾಸ ಅನುಭವಿಸುತ್ತಿರುವರೆಂದು ವಿವರಿಸಿದರು.

ಕರ್ನಾಟಕ ರಾಜ್ಯದಲ್ಲೆ 1233 ಜನ ವಿಚಾರಣೆ ಎದುರಿಸುತ್ತಾ ಜೈಲಿನಲ್ಲಿದ್ದಾರಂತೆ. ಮಹಿಳೆಯರೂ ಬಹುಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಹೆಚ್ಚಿನವರು ಸಣ್ಣ ಪುಟ್ಟ ಗುನ್ಹೆ ಮಾಡಿದವರು. ಪೋಲೀಸರ ಕುತಂತ್ರ ಕಾಯಿದೆಗಳು ಅಸ್ತಿತ್ವದಲ್ಲಿರುವುದರಿಂದಲೇ ಇವರೆಲ್ಲ ಜೈಲಿನಲ್ಲಿ ಕೊಳೆಯುವಂತಾಗಿದೆ.

20 ಅಂಶಗಳ ಕಾರ್ಯಾಚರಣೆಯಲ್ಲಿ ನ್ಯಾಯಾಂಗ ಸುಧಾರಣೆಯು, ಬ್ರಿಟಿಷ್ ಕಾಲದ ಕಾನೂನುಗಳ ಬದಲಾವಣೆಯು, ತ್ವರಿತ ನ್ಯಾಯಕೊಡಿಸುವ ಕಾರ್ಯಕ್ರಮಗಳು ಕಾಣಿಸುತ್ತಿಲ್ಲ. ಅಂತಹ ಬದಲಾವಣೆಗೆ ಚಳುವಳಿ ನಡೆಸುವುದು ಅತ್ಯಗತ್ಯ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯೊಂದೇ ತ್ವರಿತ ನ್ಯಾಯ ಕೊಡಿಸುವ ಕಾರ್ಯಕ್ರಮವನ್ನು ಹವಣಿಕೊಂಡಿದೆ.

ಅಲ್ಲಿ ಅತಿ ಮಳೆ–ಇಲ್ಲಿ ಅತಿ ಅಭಾವ

ಇದೇ ತಿಂಗಳು 15ರಂದು ವಿಜೃಂಭಣೆಯ ಸ್ವಾತಂತ್ರ್ಯೋತ್ಸವ ನಡೆಯಲಿದೆ. ರಾಜ್ಯ, ಕೇಂದ್ರಗಳಲ್ಲಿ, ದಿಲ್ಲಿ ಕೆಂಪು ಕೋಟೆಯಲ್ಲಿ ನಡೆಯುವ ಕಾರ್ಯಕ್ರಮಗಳು ಮಂಗಳೂರು–ಕಾರವಾರ ಜಿಲ್ಲೆಗಳಲ್ಲಿ ಅತಿ ಮಳೆಯಿಂದಾಗಿ ಉಂಟಾದ ಜೀವಹಾನಿ, ಆಸ್ತಿ ಹಾನಿ, ಮಣ್ಣು ಕೊರೆತದಿಂದ ಹಳ್ಳಿಗೆ ಹಳ್ಳಿಗಳೇ ನಾಶವಾಗಿರುವುದು, ಕೋಲಾರ, ಬಿಜಾಪುರ ಮತ್ತಿನ್ನಿತರ ಜಿಲ್ಲೆಗಳಲ್ಲಿಯ ಬರಗಾಲ ಪರಿಸ್ಥಿತಿಯನ್ನು ಮರೆಸುತ್ತವೆ.

ರಾಜ್ಯದಲ್ಲಿ ಅಭಾವ ಪರಿಸ್ಥಿತಿಯ ಪರಿಹಾರಕ್ಕೆ ರಾಜ್ಯ ಸರಕಾರ ರೂ. 8 ಕೋಟಿ ಮಂಜೂರು ಮಾಡಿದೆಯೆಂದು ಸಾರುವ ಒಂದು ದೃಶ್ಯವಾದರೆ, ಶಿವಮೊಗ್ಗ, ಧಾರವಾಡ, ಮಂಗಳೂರು–ಕಾರವಾರ ಜಿಲ್ಲೆಗಳಲ್ಲಿ ಅಪಾರ ನೆರೆಯಿಂದಾಗಿರುವ ಹಾನಿ ತುಂಬಿಕೊಳ್ಳಲು ಜನರಬೇಡಿಕೆಯ ಮತ್ತೊಂದು ಕರುಣಾಜನಕ ದೃಶ್ಯ.

ಸ್ವಾತಂತ್ರ್ಯ ಪಡೆದ 35 ವರ್ಷಗಳಲ್ಲಿ ಪ್ರತಿ ವರ್ಷ ಜನತೆ ಅನುಭವಿಸುವ ಅನುಭವಗಳಿವು. ಮಳೆ ಬಂದಾಗ ಕೊಡೆ ಹಿಡಿಯಬೇಕೆಂಬ ಗಾಥೆಯಂತೆ, ಅಭಾವ ಪರಿಸ್ಥಿತಿಗೂ ಪರಿಹಾರ, ಅತಿ ಮಳೆಗೂ ಪರಿಹಾರ. ಚುನಾವಣೆಯಲ್ಲಿ ಓಟು ಗಿಟ್ಟಿಸಲು ಕಾಂಗೈಗೆ ಇದು ಸುಲಭ ಪರಿಹಾರ.

ಪ್ರತಿ ವರ್ಷವೂ ಈ ಎರಡು ಸಮಸ್ಯೆಗಳನ್ನು 35 ವರ್ಷಗಳಿಂದಲೂ ಸಹಿಸುತ್ತಲೇ ಬಂದಿದ್ದೇವೆ. ಇದಕ್ಕೆ ಪರಿಹಾರ ಇಲ್ಲವೇ? ಇದೆ. ಮಾರ್ಕ್ಸ್‌ವಾದ ಪಕೃತಿಯನ್ನು ಹಿಡಿತದಲ್ಲಿಟ್ಟುಕೊಂಡು, ಮಾನವ ಕಲ್ಯಾಣಕ್ಕಾಗಿ ಅದರ ಉಪಯೋಗ ಯಾವ ರೀತಿ ಮಾಡಿಕೊಳ್ಳಬೇಕೆಂಬುದನ್ನು ತೋರಿಸಿಕೊಡುತ್ತದೆ. ನಮ್ಮ ದೇಶದಲ್ಲಿ ವಿಜ್ಞಾನಿಗಳ ಕೊರತೆಯಿಲ್ಲ. ನಮ್ಮ ದೇಶದಲ್ಲಿ ತಮ್ಮ ವಿಜ್ಞಾನಕ್ಕೆ, ಸಂಶೋಧನೆಗಳಿಗೆ ಬೆಲೆಯಿಲ್ಲವೆಂದು ತಿಳಿದು ಬಹಳಷ್ಟು ಜನ ವಿದೇಶಗಳಲ್ಲಿ ನೆಲೆಸಿದ್ದಾರೆ. ಉಳಿದವರಿಗೆ ನಮ್ಮ ಸರಕಾರದಿಂದ ಪ್ರೋತ್ಸಾಹ ಸಿಗುತ್ತಿಲ್ಲ. ವಿಜ್ಞಾನ, ಸಂಶೋಧನೆಗಳಲ್ಲೂ ಇಂದಿರಾ ಸರಕಾರ ರಾಜಕಾರಣ ತರುತ್ತಿರುವುದರಿಂದ, ಅವರ ಬುದ್ಧಿಮತ್ತೆಯ ಉಪಯೋಗ ಭಾರತ ದೇಶದ ಜನರಿಗೆ, ಜನರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ದೊರೆಯಲಾರದಾಗಿದೆ.

ಪ್ರಕೃತಿಯಲ್ಲಿ ಅಡಗಿರುವ ಸಂಪತ್ತು, ಪ್ರಕೃತಿಯ ಪ್ರಕೋಪ-ದೇವರ ದೇಣಿಗೆಯಲ್ಲ, ದೇವರ ಆದೇಶದಂತೆ ನೈಸರ್ಗಿಕ ಸಂಪತ್ತು ಮಾನವ ಕುಲ ಕೋಟಿಯ ಸಹಾಯಕ್ಕೆ ಬರುವುದೂ ಇಲ್ಲ, ಪ್ರಕೃತಿ ಪ್ರಕೋಪ–ಮಾನವ ಕುಲವನ್ನು ನಾಶ ಮಾಡುವುದೂ ಇಲ್ಲ. ಮಾರ್ಕ್ಸ್‌ವಾದವನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಚೈನಾ – ರಷ್ಯಾ ದೇಶದ ಕಮ್ಯೂನಿಸ್ಟಸರಕಾರಗಳು ಇವೆರಡನ್ನೂ ಹೇಗೆ ಉಪಯೋಗಿಸಿ, ತಮ್ಮ ದೇಶಗಳ ಅಭಿವೃದ್ಧಿಗೆ, ಮನುಷ್ಯನಿಗೆ ಸುಖ ಸೌಲಭ್ಯ ಒದಗಿಸುವುದಕ್ಕೆ ಯಾವ ರೀತಿ ಕಾರ್ಯವೆಸಗಿವೆಂಬುದು ಸಾರ್ವಜನಿಕರ ಬಹಿರಂಗ ಸೊತ್ತಾಗಿದೆ. ಬಂಡ

ಏನು ಮಾಡುತ್ತಾರೆ ?

—ಎನ್ಕೆ

ವಾಳಶಾಹಿ ಪಥದಲ್ಲಿ ಆಡಳಿತ ನಡೆಸುವ ಇಂದಿರಾ ಕಾಂಗ್ರೆಸ್ಸಿನಿಂದ ಈ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಒದಗಿಸಲು ಸಾಧ್ಯವಿಲ್ಲ. ಅಪಾರ ಹಣ ಖರ್ಚಾಗುತ್ತಿದೆ ಆದರೆ ಪ್ರತಿ ಫಲವಿಲ್ಲ. ನಾವೆದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸಿಗಬೇಕಾದರೆ ಕಾಂಗ್ರೆಸ್ ಸರಕಾರ ಹೋಗಿ ಜನತಾ ಪ್ರಜಾ ಪ್ರಭುತ್ವ ಸರಕಾರ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಮುಖಂಡತ್ವದ ಅಸ್ತಿತ್ವದಲ್ಲಿ ಬರಬೇಕಾಗಿದೆ. ಅದರ ಸಲುವಾಗಿ ಸತತ ಪ್ರಯತ್ನ ನಡೆಯಬೇಕು. ಅದು ಯಶಸ್ವಿಯಾಗಬೇಕಾದರೆ ಕಾರ್ಮಿಕವರ್ಗ, ಬುದ್ಧಿ ಜೀವಿ ಜನ ಮಾರ್ಕ್ಸ್‌ವಾದದ– ಲೆನಿನವಾದದ ಕೆಲವು ಮೂಲ ಸಿದ್ಧಾಂತಗಳನ್ನಾದರೂ ಅಭ್ಯಾಸ ಮಾಡಿ, ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಾರ್ಟಿ ದೇಶ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಯಾವ ಕಾರ್ಯ ಕ್ರಮ ಹಾಕಿಕೊಂಡಿದೆಂಬುದನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಮಾರ್ಕ್ಸ್‌ವಾದಿ ಸಿದ್ಧಾಂತ ಜಗತ್ತಿನಲ್ಲಿ ತನ್ನ ಮೇಲ್ಮೆಯನ್ನು ತೋರಿಸಿಕೊಟ್ಟಿದೆ. ಬಂಡವಾಳಶಾಹಿ ಸಿದ್ಧಾಂತ ಮುಗ್ಗರಿಸುತ್ತಿರುವಾಗ, ಹೆಚ್ಚಿನ ಜನ, ದಕ್ಷಿಣ ಅಮೇರಿಕದಲ್ಲಾಗಲೀ ಆಫ್ರಿಕದಲ್ಲಾಗಲೀ, ಆಸ್ಟ್ರೇಲಿಯಾಖಂಡದಲ್ಲಾಗಲೀ, ಮುಸಲ್ಮಾನ ರಾಷ್ಟ್ರಗಳಲ್ಲಾಗಲೀ ಮಾರ್ಕ್ಸ್‌ವಾದ, ಕಮ್ಯೂನಿಸಂನಿಂದ ಆಕರ್ಷಿತರಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಆದ್ದರಿಂದ ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಾರ್ಟಿಯ ರಾಜಕೀಯ ನಿಲುವುಗಳ ಅಭ್ಯಾಸ ನಡೆಸಬೇಕು.

ಬರೀ ಭರವಸೆಗಳು

ಕರ್ನಾಟಕ ರಾಜ್ಯದಲ್ಲಿ ವಿಪರೀತ ಮಳೆಯಿಂದಾಗಿ ಭೀಕರ ಅನಾಹುತಗಳಲ್ಲಿ ಆಸ್ತಿ, ದನ, ಕೂಸುಗಳು, ಭೂಮಿ, ಬೆಳೆಗಳೆಲ್ಲ ಕೆಲವೇ ಗಂಟೆಗಳಲ್ಲಿ ಕಣ್ಣಿನಿಂದ ಮರೆಯಾಗುತ್ತಿದ್ದಾಗ ಕಣ್ಣೀರು ಕೋಡಿಯಾಗಿ ಹರಿಯುತ್ತದೆ, ಮನಸ್ಸು ಮುದುಡುತ್ತದೆ, ಬಾಡಿದ ಹೂವಾಗುತ್ತದೆ.

ಹಾಸನ- ಬೆಂಗಳೂರು ಕಡೆಗಳಿಂದ ಬರುವ ಬಸ್ಸುಗಳಿಗೆ ಹೆದ್ದಾರಿಯಾದ ಬಂಟ್ವಾಳ-ಮಂಗಳೂರು ರಸ್ತೆಯಲ್ಲಿರುವ ಬ್ರಹ್ಮರ ಕೊಟ್ಟು ಪ್ರದೇಶದ 3 ಕಿ. ಮೀಟರ್ ರಸ್ತೆಯಾಗದೆ ಹೋದರೆ, ಈ ಮಳೆಗಾಲದೊಳಗೆ ರಸ್ತೆ ವಿಸ್ತರಿಸುವ ಆಶ್ವಾಸನೆ, ಯೋಜನೆಗಳಲ್ಲಿ ಆಗಿ ಹೋಗಿವೆ. ಆದರೆ ಮಳೆ ತುಂಬ ಹರಿದು ನಾಗರೀಕರಿಗೆ ಅಪಾರ ಹಾನಿ, ಅನಾನುಕೂಲತೆಗಳಾದರೂ ಬ್ರಹ್ಮರ ಕೊಟ್ಟು ರಸ್ತೆ ಆಗಿರುವುದಿಲ್ಲ. ಮಂಗಳೂರು ದೊಡ್ಡ ವ್ಯಾಪಾರಿ ಕೇಂದ್ರ, ವಿದೇಶಿ ವಿಮಾನಗಳಿಗೂ ಉಪಯೋಗವಾಗುವಂಥ ದೊಡ್ಡ ವಿಮಾನ ನಿಲ್ದಾಣ ರಚಿಸಲಾಗುವುದೆಂಬ ಭರವಸೆ ಹಲವಾರು ವರ್ಷಗಳಿಂದ ಸುರಿಮಳೆಯಂತೆ ಹರಿದಿದೆ. ಆದರೆ ಮಳೆಗಾಲದಲ್ಲಿ "ರನ್‌ವೇ" ಚಿಕ್ಕದಾಗಿರುವುದರಿಂದ ವಿಮಾನ ಪ್ರಮಾಣವಿಲ್ಲ. ದೊಡ್ಡ "ರನ್‌ವೇ" ರಚನೆಯಾಗಲು ಇನ್ನೆಷ್ಟು ಮಳೆಗಾಲ ಗತಿಸಬೇಕೋ ?

ಕರ್ನಾಟಕದಲ್ಲಿ ಪೂರ್ಣಗೊಳ್ಳದೇ ಇರುವ ಬೃಹತ್ ಯೋಜನೆಗಳು— ಘಟಪ್ರಭಾ ಮೂರನೆಯ ಹಂತ, ಇದಕ್ಕೆ ಮೊದಲ ಅಂದಾಜು ರೂ. 94-54 ಕೋಟಿ, ಪರಿಷ್ಕೃತ ಅಂದಾಜು ರೂ. 125 ಕೋಟಿ, ಮಲಪ್ರಭಾ ಮೊದಲ ಅಂದಾಜು ರೂ. 19-91 ಕೋಟಿ, ಈಗಿನ ಅಂದಾಜು 192 ಕೋಟಿ, ರೂ. ಕೃಷ್ಣಾ ಮೇಲ್ದಂಡೆ ಮೊದಲ ಹಂತ ರೂ. 58–20ಕೋಟಿ, ಪರಿಷ್ಕೃತ ಅಂದಾಜು 400 ಕೋಟಿ, ಇವು ಮುಗಿಯುವತನಕ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದೆಂದು ಕೇಂದ್ರ ಸರಕಾರ ಯೋಚಿಸಿದೆಯಂತೆ. ಕಳೆದ 20–25 ವರ್ಷಗಳಿಂದ ಈ ಕೆಲಸ ತಡವಾಗಿ ಸಾವಿರಾರು ಕೋಟಿ ರೂ. ಹೆಚ್ಚು ಖರ್ಚಾಗುತ್ತಿದೆ.

ವಿಜಯನಗರ ಉಕ್ಕಿನ ಕಾರ್ಖಾನೆ, ಕಾಳಿಯೋಜನೆ ಹೀಗೆ ಹಲವಾರು ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಆಶ್ವಾಸನೆಗಳ ಸುರಿಮಳೆಯಲ್ಲಿ ಕೊಚ್ಚಿಕೊಂಡು ಹೋಗುವಪರಿಸ್ಥಿತಿಯಲ್ಲಿವೆ.

ಮಳೆಯಿಂದ ಹಾನಿ, ಬಡತನದಿಂದ ಹಾನಿ, ನೈಸರ್ಗಿಕ ಸಂಪತ್ತಿನ ಹಾನಿ, ಇನ್ನಾದರೂ ಜನ ಇಂದಿರಾ ಗಾಂಧಿಯ "ಹಸ್ತ"ಕ್ಕೆ ಮರುಳಾಗುವುದನ್ನು ಬಿಟ್ಟು ತಾವೆದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲು ತಯಾರಾಗಬೇಕು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೇಳುತ್ತಿರುವಂತೆ, ರೈತ, ಕಾರ್ಮಿಕರ, ಜನತೆಯ ಚಳುವಳಿ ಮಾಡಿ, ಅವರಲ್ಲಿ ರಾಜಕೀಯ ಜಾಗೃತಿಯನ್ನುಂಟುಮಾಡಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಯನ್ನು ಬೆಳಸುವುದು ಅತ್ಯಗತ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರತರ ಪ್ರಚಾರ, ಪ್ರಕ್ಷೋಭೆ ನಡೆಯಬೇಕು. ಇದು ಕಷ್ಟದ ಕೆಲಸ ಆದರೂ ಕಾರ್ಯನಿರತವಲ್ಲದ ಕಾಂಗ್ರೆ ಸರಕಾರವನ್ನುರುಳಿಸಲು ಜನಜಾಗೃತಿಯಲ್ಲಿ ತೊಡಗೋಣ, ಹೋರಾಟಕ್ಕೆ ಅಣಿಯಾಗೋಣ.

●

ಹೊಸಪೇಟೆ

ವಿಚಾರ ಸಂಕಿರಣ

15–7–82 ರಂದು ಹೊಸಪೇಟೆಯ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಆಶ್ರಯದಲ್ಲಿ "ಪವಾಡ"ಗಳ ಕುರಿತು ವಿಚಾರ ಸಂಕಿರಣ ನಡೆಯಿತು. ಅಧ್ಯಕ್ಷತೆಯನ್ನು ಕಾದಂಬರಿಕಾರ್ತಿ ಶ್ರೀಮತಿ ಗೀತಾ ಕುಲಕರ್ಣಿಯವರು ವಹಿಸಿದ್ದರು.

ಸ್ಥಳೀಯ ಕಾಲೇಜಿನ ಪ್ರಾಧ್ಯಾಪಕ ಶ್ರೀ ಶಿವಾನಂದ ಇವರು ಮಾತನಾಡುತ್ತಾ ಪವಾಡವು ಮಾನಸಿಕ ಶಕ್ತಿಯ ಪ್ರದರ್ಶನವಾಗಿದೆ ಎಂದರು. ಈ ಪವಾಡ ಪ್ರದರ್ಶನದ ಪರಿಣಾಮಗಳನ್ನು ವಿವರಿಸುತ್ತಾ, ವಿಜ್ಞಾನದ ಹೊಸ ಸಿದ್ಧಾಂತಗಳು ಬಂದಾಗ ಪವಾಡಗಳ ನಿಜಬಣ್ಣ ಬಯಲಾಗುತ್ತದೆ ಎಂದರು.

ನಂತರ ಡಾ|| ಶೆಟ್ಟಿಯವರು ಮಾತನಾಡುತ್ತಾ, ಕೆಲವರು ಪವಾಡಗಳ ಹೆಸರಿನಲ್ಲಿ ಮುಗ್ಧ ಜನರನ್ನು ಶೋಷಿಸುತ್ತಿರುವುದನ್ನು ತೀವ್ರವಾಗಿ ಟೀಕಿಸಿದರು.

ಕೊನೆಯಲ್ಲಿ ಗುರುಶಾಂತ್ ಅವರು ಮಾತನಾಡುತ್ತಾ, ಶೂನ್ಯದಿಂದ ಸೃಷ್ಟಿ ಸಾಧ್ಯವಿಲ್ಲ, ನಾವೆಲ್ಲ ಪವಾಡಗಳ ಬಗ್ಗೆ ಮೂಢ ನಂಬಿಕೆಗಳನ್ನು ಕೈಬಿಡಬೇಕೆಂದರು.

ಆರಂಭದಲ್ಲಿ ಕುಮಾರಿ ಶಿವಗಂಗಮ್ಮ ಸ್ವಾಗತಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ಯಶೋಧರೆ ನಿರ್ದೇಶಿಸಿದರು. ಕೊನೆಯಲ್ಲಿ ಅಂಬಿಕಾ ಜಾಲಗಾರ ಅವರು ವಂದಿಸಿದರು.

○

ಮೈಸೂರು

ಕಾರ್ಯಕಾರಿ ಸಮಿತಿ ಸಭೆ

ದಿನಾಂಕ 28–7–1982 ರಂದು ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸಭೆ ಸಂಘದ ಅಧ್ಯಕ್ಷರಾದ ಕಾಂ| ಎಂ. ಎಸ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ನಗರ ಸಭಾ ಕಮೀಷನರ್‌ರವರು ಪೌರ ಕಾರ್ಮಿಕರ ಬೇಡಿಕೆಯಾದ ವೈದ್ಯಕೀಯ ಮತ್ತು ಶೌಚತ್ಯ ಭತ್ಯವನ್ನು ಹಂಗಾಮಿ ಕೆಲಸಗಾರರನ್ನು ಖಾಯಂಗೊಳಿಸುವುದನ್ನು ಮತ್ತು ಹೆಚ್ಚಾಗಿ ಕೆಲಸಗಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿತು. ಹಾಗೂ ಯಾದವಗಿರಿ ಕೈಗಾರಿಕಾ ಬಡಾವಣೆಯಲ್ಲಿರುವ ಪಾಮ್ಸ್‌ಕೋಕನಟ್ ಪ್ಯಾಕ್ಟರಿಗೆ ಮಾಲೀಕರು ಅಕ್ರಮ ಬೀಗಮುದ್ರೆಯನ್ನು ಹಾಕಿರುವುದನ್ನು ಕೂಡಲೇ ತೆರವು ಮಾಡಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಂಡು ಅವುಗಳ ಜಾರಿಗಾಗಿ ಪ್ರಯತ್ನಿಸಬೇಕೆಂದು ತೀರ್ಮಾನಿಸಿತು.

○

ಶಿವಮೊಗ್ಗ

ನೆರೆಪೀಡಿತರಿಗೆ ಪರಿಹಾರ ನೀಡುವಲ್ಲಿ ವಿಳಂಬ ಖಂಡನೀಯ

—ಕಾಂ| ಸೂರಿ

ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಕಾಂ| ಸೂರ್ಯನಾರಾಯಣರಾವ್ ಅವರು ಆಗಸ್ಟ 8ರಂದು ಶಿವಮೊಗ್ಗ ನಗರದ ನೆರೆ ಪೀಡಿತ ನೂರಾರು ಕುಟುಂಬಗಳನ್ನು ಸಂದರ್ಶಿಸಿದರು. ನೆರೆ ಹಾವಳಿಯಾಗಿ ಒಂದುವಾರ ಕಳೆದರೂ ಸಂಬಂಧಪಟ್ಟ ಸರಕಾರಿ ಅಧಿಕಾರಿಗಳು ಸಂತ್ರಸ್ತರಿಗೆ ಪರಿಹಾರ ಒದಗಿಸದೇ ಇದ್ದುದಕ್ಕೆ ಕಾಂ| ಸೂರಿ ತಮ್ಮ ವಿಷಾದ ವ್ಯಕ್ತಪಡಿಸಿದರು.

ನೆರೆ ಪೀಡಿತ ಪ್ರದೇಶಗಳನ್ನು ಸಂದರ್ಶಿಸುತ್ತಿದ್ದಂತೆ, ಸಂತ್ರಸ್ತ ಜನರು ತಮ್ಮ ಗೋಳನ್ನು ತೋಡಿಕೊಂಡರು. ನೆರೆ ಹಾವಳಿಗೊಳಗಾದವರಿಗೆ ಪರಿಹಾರ ಕಾರ್ಯ ಪ್ರಾರಂಭವಾಗಲಿಲ್ಲವೆಂದೂ, ಊಟ-ವಸತಿಗಳ ಸೌಕರ್ಯಗಳನ್ನೂ ಸರಿಯಾಗಿ ಒದಗಿಸಲಿಲ್ಲವೆಂದೂ, ತಾತ್ಕಾಲಿಕವಾಗಿ ಶಾಲೆಗಳಲ್ಲಿ ರಕ್ಷಣೆ ಪಡೆಯುತ್ತಿರುವ ಸಂತ್ರಸ್ತ ಜನರನ್ನೂ ಹೊರಹೋಗಲು ಒತ್ತಾಯಿಸಲಾಗುತ್ತಿದೆಯೆಂದೂ, ನೆರೆ ಹಾವಳಿಗೊಳಗಾದ ಸಾವಿರಾರು ಮನೆಗಳ, ಗುಡಿಸಲುಗಳ, ಅಂಗಡಿಗಳ ಆಸ್ತಿಪಾಸ್ತಿಗಳ ಮಹಜರ್ ನಡೆಸಿದ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಅಪಾರ ಕಷ್ಟನಷ್ಟಗಳನ್ನು ಮುಚ್ಚುಮರೆ ಮಾಡುತ್ತಿರುವರೆಂದು ತಿಳಿದು ಬಂದಿತು. ಹಲವಾರು ನೆರೆ ಪೀಡಿತ ಬಡ ಕುಟುಂಬಗಳು ತಮ್ಮ ಗುಡಿಸಲುಗಳನ್ನು ಮರಳಿ ಪಡೆಯಲು ಅಡೆ–ತಡೆಗಳನ್ನು ಎದುರಿಸುವ ಭಯವಿದೆ. ನಗರದ ಮಧ್ಯದಿಂದ ಹರಿದು ಹೋಗುತ್ತಿರುವ ತುಂಗಾ ನದಿಯ ದಡದ ಉದ್ದಕ್ಕೂ ಇರುವ ಸಾವಿರಾರು ಮನೆಗಳೂ, ಗುಡಿಸಲುಗಳೂ ಸಂಪೂರ್ಣ ನಾಶವಾಗಿದ್ದು ಪರಿಹಾರ ಪುನರ್ವಸತಿ ಕಾರ್ಯಗಳು ಕೂಡಲೇ ಆಗಬೇಕಿದೆ.

ನೆರೆ ಪೀಡಿತ ಪ್ರದೇಶಗಳಿಗೆ ಸಂದರ್ಶನವಿತ್ತ ಕಾಂ| ಸೂರಿಯವರೊಂದಿಗೆ ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾಂ| ಚಂದುಕುಟ್ಟಿ, ಶಿವಶಂಕರ್, ತಿರುಕಪ್ಪ ಮತ್ತು ಡಾ|| ಕೃಷ್ಣಾಜಿ ಮತ್ತಿತರ ಕಾರ್ಯಕರ್ತರೂ ಇದ್ದರು.

ಡಿ. ವೈ. ಎಫ್. ಐ. ಸ್ತುತ್ಯ ಕಾರ್ಯ :

ಪ್ರವಾಹ ಪೀಡಿತ ಶಿವಮೊಗ್ಗ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳ ಸಂತ್ರಸ್ತ ಜನರಿಗೆ ಡಿ. ವೈ. ಎಫ್. ಐ. ಕಾರ್ಯಕರ್ತರು ನೆರವು ಸಲ್ಲಿಸುತ್ತಿದ್ದಾರೆ. ಜನರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವಲ್ಲಿ, ಅವರ ಸಾಮಗ್ರಿಗಳನ್ನು ತೆಗೆದುಕೊಡುವದು ಮೊದಲಾದ ಕಾರ್ಯಗಳಲ್ಲಿ ಸಕ್ರೀಯರಾಗಿದ್ದಾರೆ.

ಸಂಕಷ್ಟಕ್ಕೀಡಾಗಿರುವ ನೆರೆ ಸಂತ್ರಸ್ತರಿಗೆ ಕೂಡಲೇ ಪರಿಹಾರಧನ, ಪುನರ್ವಸತಿ ಕಲ್ಪಿಸಿಕೊಡಬೇಕೆಂದು ಯುವಜನ ಫೆಡರೇಷನ್ ಅಧ್ಯಕ್ಷ ಕಾಂ| ತಿರುಕಪ್ಪ ಸರ್ಕಾರವನ್ನು ಒತ್ತಾಯಿಸಿದ್ದಾರೆ.

●

ಮೈಸೂರು

ಅಶೋಕಪುರಂ ಡಿ. ವೈ. ಎಫ್. ಐ. ಘಟಕ ರಚನೆ

29–7–82ರಂದು ಮೈಸೂರು ನಗರದ ಅಶೋಕಪುರಂ ಬಡಾವಣೆಯಲ್ಲಿ ನಡೆದ ಯುವಕರ ಸಭೆಯನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ. ವೈ. ಎಫ್ .ಐ.) ಘಟಕವನ್ನು ರಚಿಸಲಾಯಿತು. ಬಹುತೇಕ ದಲಿತ ಯುವಜನರು ಇದರಲ್ಲಿ ಭಾಗವಹಿಸಿದ್ದರು.

ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಕಾಂ| ಮೋಹನ್ ಕುಮಾರ್ ರವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಸಂಘಟನೆಯ ಧ್ಯೆಯೋದ್ದೇಶಗಳನ್ನು ವಿವರಿಸಿದರು. ಮೈಸೂರು ಡಿ.ವೈ ಎಫ್.ಐ. ಘಟಕದ ಪ್ರಧಾನ ಕಾಯದರ್ಶಿ ಕಾಂ| ಜಯರಾಂ ಮತ್ತು ಉಪಾಧ್ಯಕ್ಷರಾದ ಕಾಂ| ಮಂಜುನಾಥ ಸ್ವಾಮಿಯವರು ಸಭೆಯಲ್ಲಿ ಮಾತನಾಡಿದರು. ಹೊಸ ಘಟಕದ ಪದಾಧಿಕಾರಿಗಳನ್ನಾಗಿ ಈ ಕೆಳಗಿನವರನ್ನು ಆಯ್ಕೆ ಮಾಡಲಾಯಿತು ಶಿವಣ್ಣ (ಅಧ್ಯಕ್ಷ), ಬಲರಾಂ (ಉಪಾ-ಧ್ಯಕ್ಷ), ಮರಿಸ್ವಾಮಿ (ಕಾಯದರ್ಶಿ) ಮಹೇಂದ್ರ ಕುಮಾರ್ (ಸಹ ಕಾರ್ಯ-ದರ್ಶಿ), ಮಹದೇವು (ಖಜಾಂಚಿ) ಮತ್ತು ಇತರ 6 ಜನ ಸಮಿತಿ ಸದಸ್ಯರು.

ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸುವ ಮತ್ತಿತರ ನಿರ್ಣಯಗಳನ್ನು ಅಂಗೀಕರಿಸಲಾಯಿತು.

●

ಆರ್ಥಿಕ ಸಮೀಕ್ಷೆ :

ಜೀವ ವಿಮಾ ನಿಗಮದ ವಿಭಜನೆ ಅಗತ್ಯವೆ?

—ಆರ್. ಚಂದ್ರು

[ಈ ಲೇಖನದ ಮೊದಲ ಭಾಗ 1-8-82 ರ ಐಕ್ಯರಂಗದಲ್ಲಿ ಪ್ರಕಟವಾಗಿತ್ತು. ಸ್ಥಳಾಭಾವದಿಂದಾಗಿ ಎರಡನೇ ಭಾಗ 8-8-82 ರ ಪತ್ರಿಕೆಯಲ್ಲಿ ಪ್ರಕಟಿಸಲಾಗಿರಲಿಲ್ಲ.]

ಸರ್ಕಾರದ ಅಲಕ್ಷ್ಯ

ಜೀವ ವಿಮಾ ಉದ್ಯಮ ರಾಷ್ಟ್ರೀಕರಣವಾದಂದಿನಿಂದ ಅದರ ಸೋಲನ್ನು ಹಾರೈಸುತ್ತಿರುವ ಸ್ಥಾಪಿತ ಹಿತಾಸಕ್ತಿಗಳು ಸಮಯ ಸಾಧಿಸುತ್ತಲೇ ಇವೆ. ನಿಗಮದ ಸಾಧನೆಗಳ ಕುರಿತು ಹೆಚ್ಚಿನ ಪ್ರಚಾರ ಕೊಡದೆ, ಅದರ ಕುಂದು ಕೊರತೆಗಳನ್ನೇ ಭೂತಗನ್ನಡಿ ಹಿಡಿಸಿ ಉತ್ಪ್ರೇಕ್ಷೆ ಮಾಡಿ ಅಪಪ್ರಚಾರ ನಡೆಯುತ್ತಿದೆ. ಕಾರ್ಮಿಕರ ಅಶಾಂತಿಯಿಂದಾಗಿ ಕಾರ್ಯದಕ್ಷತೆ ಕಡಿಮೆಯಾಗಿದೆ, ಅವರ ವೇತನದ ವೆಚ್ಚ ಹೆಚ್ಚಾಗಿದೆ ಎಂದು ಅಪಪ್ರಚಾರ ನಡೆಯುತ್ತಿದೆ. ವಾಸ್ತವವಾಗಿ ಕಳೆದ 25 ವರ್ಷಗಳಲ್ಲಿ ಜೀವ ವಿಮಾ ಪಾಲಿಸಿಗಳ ಸಂಖ್ಯೆಯು 48 ಲಕ್ಷದಿಂದ 228 ಲಕ್ಷಗಳಿಗೇರಿದ್ದು (4.75 ಪಾಲು ಹೆಚ್ಚಾಗಿದೆ) ಪ್ರತಿ ಒಬ್ಬ ನೌಕರನೂ ಸೇವೆ ಮಾಡಬೇಕಾದ ಸರಾಸರಿ ಪಾಲಿಸಿಗಳ ಸಂಖ್ಯೆಯು 276 ರಿಂದ 620ಕ್ಕೇರಿದೆ. ಒಟ್ಟು ಆಡಳಿತ ವೆಚ್ಚದಲ್ಲಿ ನೌಕರರ ಸಂಬಳ ಸವಲತ್ತುಗಳ ವೆಚ್ಚದ ಶೇಕಡಾಂಶವು 13.50 ರಿಂದ 8.95ಕ್ಕಿಳಿದಿದೆ. ನಿಗಮದ ವ್ಯವಹಾರ, ಆದಾಯ, ಲಾಭಗಳಿಕೆ, ಪಾಲಿಸಿದಾರರಿಗೆ ಕ್ಲೈಂ ಪಾವತಿ, ಇತ್ಯಾದಿಗಳು ಹತ್ತಿಪ್ಪತ್ತು ಪಾಲು ಹೆಚ್ಚಿವೆ.

ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳಿಗೆ ಹೋಲಿಸಿದಾಗ, ಸರಕಾರವು ಒಂದಲ್ಲ ಒಂದು ವಿಧದಲ್ಲಿ ಜೀವ ವಿಮಾ ನಿಗಮದ ಅಭಿವೃದ್ಧಿಯ ಕುರಿತು ಉದಾಸೀನತೆಯನ್ನೇ ವ್ಯಕ್ತಪಡಿಸುತ್ತಿದೆ. ಕಳೆದ 25 ವರ್ಷಗಳಲ್ಲಿ ಕೇಂದ್ರ ಸರಕಾರ ಈ ನಿಗಮದಲ್ಲಿ ಹೂಡಿದ ರೂ. 5 ಕೋಟಿ ಬಂಡವಾಳಕ್ಕೆ ರೂ. 97 ಕೋಟಿ ಲಾಭ ಗಳಿಸಿದೆ. ಅಲ್ಲದೆ, ನಿಗಮದ ಆದಾಯದ ಮೇಲೆ ನೂರಾರು ಕೋಟಿ ತೆರಿಗೆಯ ರೂಪದಲ್ಲಿಯೂ ಕೇಂದ್ರ ಸರಕಾರ ಗಳಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ, ಆದ್ಯತೆಯ ಕ್ಷೇತ್ರಗಳಿಗೆ, ಜೀವ ವಿಮಾ ನಿಗಮದ ಅಪಾರ ನಿಧಿಯನ್ನು ಕನಿಷ್ಠ ಬಡ್ಡಿ ದರದಲ್ಲಿ ನಿರಂತರವಾಗಿ ಪಡೆಯುತ್ತಿವೆ. ಈ ನಿಗಮ ಹೂಡುವ ನಿಧಿಯ ಮೇಲೆ ಸರಾಸರಿ ಶೇ. 7.44 ರಷ್ಟು ಮಾತ್ರ ಆದಾಯ ಸಿಗುತ್ತದೆ. ಪೋಸ್ಟಾಫೀಸು, ಕ್ಷೇಮ ನಿಧಿ, ಬ್ಯಾಂಕು, ಮತ್ತಿತರ ಹಣ ಕಾಸು ಸಂಸ್ಥೆಗಳಲ್ಲಿನ ಠೇವಣಿಗಳ ಮೇಲೆ ಶೇ. 8 ರಿಂದ ಶೇ. 15 ರಷ್ಟು ಗಳಿಸಬಹುದಾಗಿದೆ. ರೂ. 6641 ಕೋಟಿ ಜೀವ ವಿಮಾ ನಿಧಿಯಲ್ಲಿ, ರೂ. 5433 ಕೋಟಿಯಷ್ಟು ಸಾಮಾಜಿಕ ಆದ್ಯತೆಯ ಕ್ಷೇತ್ರಗಳಲ್ಲಿ ಕನಿಷ್ಠ ಬಡ್ಡಿ ದರದಲ್ಲಿ ಜೀವ ವಿಮಾ ನಿಗಮ ಹಣ ತೊಡಗಿಸಿದೆ. ಸರಕಾರ ಉದ್ದೇಶಪೂರ್ವಕವಾಗಿ ಜೀವ ವಿಮಾ ಪಾಲಿಸಿದಾರರ ಮೇಲೆ ದೇಶದ ಆರ್ಥಿಕ ಅಭಿವೃದ್ಧಿಯ ಹೊಣೆಯನ್ನು ಹೊರಿಸುತ್ತಿದೆ ಪ್ರತಿಫಲವಾಗಿ ಪಾಲಿಸಿದಾರರಿಗೆ ಏನನ್ನೂ ಕೊಡುತ್ತಿಲ್ಲ. ಪ್ರೀಮಿಯಂ ದರ ಇಳಿಸುವುದಿಲ್ಲ, ಬೋನಸ್ ಹೆಚ್ಚಿಸುವುದಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯಲು ಸಹಾಯ ಪ್ರೋತ್ಸಾಹ ನೀಡುವುದಿಲ್ಲ.

ಕೇಂದ್ರ ಸರಕಾರವು ಜೀವ ವಿಮಾ ನಿಗಮದ ಆಂತರಿಕ ಆಡಳಿತ ವಿಷಯಗಳಲ್ಲಿ ಅತಿಯಾಗಿ ಹಸ್ತಕ್ಷೇಪ ಮಾಡುತ್ತಿದ್ದು ನಿಗಮದ ಕಾರ್ಯದಕ್ಷತೆಗೆ ಅಡ್ಡಿಯನ್ನುಂಟುಮಾಡುತ್ತಿದೆ ಪೋಸ್ಟಲ್ ವಿಮೆ, ರಾಷ್ಟ್ರೀಯ ಅಭಿವೃದ್ಧಿ ಬಾಂಡುಗಳು, ಯೂನಿಟ್‌ಗಳಿಗೆ ಸಂಬಂಧಿಸಿದ ವಿಮೆ, ಇತ್ಯಾದಿ ಹೊಸ ಉಳಿತಾಯ ಯೋಜನೆಗಳಿಂದ ರಾಷ್ಟ್ರೀಕೃತ ಜೀವವಿಮಾ ಉದ್ಯಮಕ್ಕೆ ಅನವಶ್ಯಕ ಅಡೆತಡೆಗಳನ್ನು ಕೇಂದ್ರ ಸರಕಾರವೇ ಒಡ್ಡುತ್ತಿದೆ. ಜೀವ ವಿಮಾ ನಿಗಮದ ಲಾಭ ನಷ್ಟವನ್ನು ಕಂಡು ಹಿಡಿಯುವಾಗ ನಿರೀಕ್ಷೆಗಿಂತ ಹೆಚ್ಚು ಪಾಲಿಸಿದಾರರ ಸಾವು ಸಂಭವಿಸುವುದೆಂದೂ, ಆಡಳಿತ ಖರ್ಚು ಆಗುವುದೆಂದೂ ಪರಿಗಣಿಸುವುದರಿಂದ ಪಾಲಿಸಿದಾರರಿಗೆ ಹೆಚ್ಚಿನ ದರಗಳಲ್ಲಿ ಬೋನಸ್ ಸಿಗುವುದೂ ಇಲ್ಲ. ಅವರ ಪ್ರೀಮಿಯಂ ದರಗಳನ್ನು ಇಳಿಸುವುದೂ ಇಲ್ಲ.

ಜೀವ ವಿಮಾ ಅಭಿವೃದ್ಧಿಗಾಗಿ ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರಗಳಾಗಲೀ ತಮ್ಮ ವಿವಿಧ ಖಾತೆಗಳ ಹಾಗೂ ತಮ್ಮ ನಿಯಂತ್ರಣದಲ್ಲಿರುವ ಸಾರ್ವಜನಿಕ ರಂಗದ ಸಂಸ್ಥೆಗಳ ನಿಕಟ ಸಹಕಾರವನ್ನು ನೀಡಲು ನಿಯೋಜಿತ ಪ್ರಯತ್ನ ಮಾಡುತ್ತಿಲ್ಲ. ಜೀವ ವಿಮಾ ನಿಧಿಯಿಂದ ಸಾರ್ವಜನಿಕ ಆದ್ಯತೆಯ ಕ್ಷೇತ್ರಗಳಲ್ಲಿ ಹಣ ಹೂಡುತ್ತಿದ್ದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಜೀವ ವಿಮಾ ನಿಗಮವು ಗಣನೀಯ ಪಾತ್ರ ವಹಿಸುತ್ತಿರುವುದನ್ನು ಸಾಕಷ್ಟು ಪ್ರಚಾರಗೊಳಿಸಿ ಪಾಲಿಸಿದಾರರಲ್ಲಿ, ವಿಮಾ ಪ್ರತಿನಿಧಿಗಳಲ್ಲಿ, ನೌಕರರಲ್ಲಿ, ಸಾರ್ವಜನಿಕರಲ್ಲಿ ಈ ನಿಗಮದ ಕುರಿತು ಅಭಿಮಾನ ಬೆಳೆಸಲು ಹೆಚ್ಚಿನ ಪ್ರಯತ್ನ ನಡೆಯುತ್ತಿಲ್ಲ. ಬದಲು ಜೀವವಿಮಾ ನಿಗಮ ಎಂದಾಕ್ಷಣ, ಅಲ್ಲಿನ ನೌಕರರ ಹೋರಾಟ, ಅಶಾಂತಿ ಇದನ್ನೆಲ್ಲಾ ದೊಡ್ಡದಾಗಿ ತೋರಿಸಿ ಸಮಯ ಸಮಯದ ಪರಿವೆ ಇಲ್ಲದೆ ಟೀಕಿಸಲಾಗುತ್ತಿದೆ.

ವಿಭಜನೆಯಿಂದ ಪ್ರಯೋಜನವಿಲ್ಲ

ವಿಭಜನೆಯಿಂದ ಕೇಂದ್ರೀಯ ಯೋಜನೆ; ನಿರ್ದೇಶನ, ನಿಯಂತ್ರಣ ಮತ್ತು ಬೃಹತ್ ಪ್ರಮಾಣದ ವ್ಯವಹಾರಗಳಿಂದಾಗುವ ಮಿತವ್ಯಯ ಇತ್ಯಾದಿ: ಅನುಕೂಲಗಳು ಇಲ್ಲದಂತಾಗುವುವು. ಪ್ರಾದೇಶಿಕ ಅಸಮಾನತೆ ಹೆಚ್ಚುವುದು. ಪ್ರಾಂತೀಯತೆಯ ಭಾವನೆ ಹೆಚ್ಚಿ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಉಂಟಾಗುವುದು. ಆಡಳಿತ ತಜ್ಞತೆಯನ್ನು ದೇಶಾದ್ಯಂತ ಸಮಾನವಾಗಿ ಬಳಸಲು ಸಾಧ್ಯವಾಗಲಾರದು. 4-5 ಕೇಂದ್ರ ಕಛೇರಿಗಳ ಮತ್ತು ಅವುಗಳ ಹತ್ತಾರು ವರಿಷ್ಠ ಅಧಿಕಾರಗಳ ಹಾಗೂ ಅವರ ಸಿಬ್ಬಂದಿಗಳ ವೆಚ್ಚದಿಂದಾಗಿ ಆಡಳಿತ ವೆಚ್ಚ ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲ. 4-5 ನಿಗಮಗಳೊಳಗಿನ ಪೈಪೋಟಿಗಳಿಂದ ರಾಷ್ಟ್ರೀಕರಣ ಪೂರ್ವದಲ್ಲಿದ್ದಂತೆ ಅನವ್ಯಶಕ ಖರ್ಚು, ಅಕ್ರಮ ವ್ಯವಹಾರ, ಭ್ರಷ್ಟಾಚಾರ ಪುನಃ ತಲೆ ಎತ್ತುವುವು. ನಗರ ಪ್ರದೇಶಗಳಲ್ಲಿ ಹೊಸ ವ್ಯವಹಾರ ಪಡೆಯುವುದು ಸುಲಭವೂ ಕಡಿಮೆ ವೆಚ್ಚವೂ ಆಗಿರುವುದರಿಂದ ಹೊಸ ನಿಗಮಗಳ ಶಾಖೆಗಳು ನಗರ ಪ್ರದೇಶಗಳಲ್ಲಿಯೇ ಕೇಂದ್ರೀಕೃತವಾಗುವ ಸಂಭವ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಜೀವ ವಿಮಾ ಉದ್ಯಮದ ಅಭಿವೃದ್ಧಿಯ ಉದ್ದೇಶ ದೂರ ಉಳಿಯುವುದು.

ಪ್ರೀಮಿಯಂ ದರಗಳು, ಬೋನಸ್ ದರಗಳು, ಪಾಲಿಸಿ ಷರತ್ತುಗಳು ದೇಶಾದ್ಯಂತ ಒಂದೇ ಆಗಿರುವುದಾದರೆ ಪೈಪೋಟಿಯಲ್ಲಿ ಅರ್ಥವಿರುವುದಿಲ್ಲ. ರಾಷ್ಟ್ರೀಕೃತ ಸಂಸ್ಥೆಗೆ ಪೈಪೋಟಿಗಿಂತ ದಕ್ಷ ಸೇವೆ, ಉಳಿತಾಯ ಮತ್ತು ಹಣ ಹೂಡುವಿಕೆ, ಆರ್ಥಿಕ ಅಭಿವೃದ್ಧಿ, ಪ್ರಾದೇಶಿಕ ಅಸಮಾನತೆ ನೀಗಿಸುವುದು, ಇತ್ಯಾದಿ ಗುರಿಗಳೇ ಮುಖ್ಯವಾದವುಗಳು. ಈಗಲೂ ಒಂದೇ ನಿಗಮದಲ್ಲಿ ವಲಯ ವಲಯಗಳಿಗೂ, ವಿಭಾಗ ವಿಭಾಗಗಳಿಗೂ, ಶಾಖೆ ಶಾಖೆಗಳಿಗೂ, ಅಭಿವೃದ್ಧಿ ಅಧಿಕಾರಿಗಳೊಳಗೂ, ವಿಮಾ ಪ್ರತಿನಿಧಿಗಳೊಳಗೂ ಆಂತರಿಕವಾಗಿ ಆರೋಗ್ಯಕರವಾದ ಪೈಪೋಟಿ ಇದ್ದು ನಿಗಮದ ಕಾರ್ಯದಕ್ಷತೆಗೆ ಅನುಕೂಲವಾಗಿದೆ. ಸಾಮಾನ್ಯ ವಿಮಾ ಕಂಪನಿಗಳು, ಬ್ಯಾಂಕುಗಳು ರಾಷ್ಟ್ರೀಕರಣವಾದ ಮೇಲೂ ತಮ್ಮ ಮೊದಲಿನ ಅಸ್ತಿತ್ವವನ್ನು ಉಳಿಸಿಕೊಂಡು ಪೈಪೋಟಿ ನಡೆಸುತ್ತಿರುವುದರಿಂದ ಅವುಗಳ ಕಾರ್ಯದಕ್ಷತೆಯಾಗಲೀ, ವ್ಯವಹಾರಗಳಾಗಲೀ ಹೆಚ್ಚಿರುವುದು ಕಂಡುಬರಲಿಲ್ಲ.

ಮೇಲಿನ ಎಲ್ಲ ಕಾರಣಗಳಿಂದ ಜೀವ ವಿಮಾ ನಿಗಮದ ವಿಭಜನೆಯು ಅನವಶ್ಯಕ, ಅಪಾಯಕಾರಿ. ಕಾರ್ಮಿಕ ವಿರೋಧಿ ಹಾಗೂ ಸಮಾಜ ವಿರೋಧಿ. ನಿಗಮದ ಕಾರ್ಯದಕ್ಷತೆ, ವ್ಯವಹಾರ ಹೆಚ್ಚಿಸಲು, ಆಂತರಿಕ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡದೆ ಸ್ವಾಯತ್ತತೆಯನ್ನು ನೀಡಬೇಕು. ದೇಶಾದ್ಯಂತ ಹೆಚ್ಚಿನ ಸಂಖ್ಯೆಗಳಲ್ಲಿ ವಿಭಾಗ ಕಚೇರಿಗಳನ್ನು, ಶಾಖೆಗಳನ್ನು ತೆರೆಯಬೇಕು. ನೌಕರರಲ್ಲಿ, ವಿಮಾ ಪ್ರತಿನಿಧಿಗಳಲ್ಲಿ ನಿಗಮದ ಕುರಿತು ಸ್ವಾಭಿಮಾನ ಹೆಚ್ಚಿಸಿ ಅವರ ಸಕ್ರಿಯ ಸಹಕಾರ ಗಳಿಸಬೇಕು. ಆಡಳಿತದಲ್ಲಿ ಅವರೂ ಪಾಲುದಾರರಾಗಬೇಕು. ಕೇಂದ್ರೀಯ ಯೋಜನೆ, ನಿರ್ದೇಶನೆ, ನಿಯಂತ್ರಣ ಮತ್ತು ವಿಕೇಂದ್ರಿತ ಪಾಲಿಸಿದಾರರ ಸೇವೆಯೇ ಈಗಿನ ಕುಂದುಕೊರತೆಗಳನ್ನು ನೀಗಿಸಲು ಸರಿಯಾದ ಮಾರ್ಗ. ಕೇಂದ್ರ ಸರ್ಕಾರ ನಿಗಮದ ಲಾಭ ಗಿಟ್ಟಿಸುವ ಬದಲು ಜೀವವಿಮಾ ಉದ್ಯಮದ ಸರ್ವೋತೋಮುಖ ಅಭಿವೃದ್ಧಿಗೆ ಸಕ್ರಿಯ ಸಹಾಯ, ಸಹಕಾರ ನೀಡಬೇಕು.

(ಮುಗಿಯಿತು)

●

ಬೆಂಗಳೂರು

ಸರಕಾರದ ನಿರ್ದೇಶನದ ಉಲ್ಲಂಘನೆ

ಕ್ಯಾಪ್‌ಸ್ಟೀಲ್ ಕಾರ್ಖಾನೆ ಮಾಲೀಕರ ದೌರ್ಜನ್ಯ

ನಗರದ ವೈಟ್‌ಫೀಲ್ಡ್‌ನಲ್ಲಿರುವ ಕ್ಯಾಪ್‌ಸ್ಟೀಲ್ (ಈ ಕಾರ್ಖಾನೆಯ ಕಾರ್ಮಿಕರ ಹೋರಾಟದ ವಿವರ ಈಗಾಗಲೇ ಐಕ್ಯರಂಗದಲ್ಲಿ ಪ್ರಕಟವಾಗಿದೆ) ಕಾರ್ಖಾನೆ ಮಾಲೀಕರ ದೌರ್ಜನ್ಯ ಪರಾಕಾಷ್ಠೆಗೆ ಮುಟ್ಟಿದೆ. ಹಂಗಾಮಿ ಕೆಲಸಗಾರ (ಒಟ್ಟು 450 ಕೆಲಸಗಾರರಲ್ಲಿ 330 ಕೆಲಸಗಾರರು ಹಂಗಾಮಿ) ರನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಇಲ್ಲಿನ ಕಾರ್ಮಿಕರು ಕಳೆದ 120 ದಿನಗಳಿಂದ ಮುಷ್ಕರದಲ್ಲಿದ್ದಾರೆ. ಮಾಲೀಕರು ಅಕ್ರಮ ಬೀಗಮುದ್ರೆ ಘೋಷಿಸಿ ಹೊಸಬರನ್ನು ನಿಯಮಿಸಿ ಕೆಲಸ ಪ್ರಾರಂಭಿಸಿದ್ದಾರೆ.

ಬೀಗಮುದ್ರೆ 'ಅಕ್ರಮ' :

ನಿಜವಾದ ಕೆಲಸಗಾರರಿಗೆ ಕೆಲಸ ನಿರಾಕರಿಸಿರುವ ಮಾಲೀಕರ ಕ್ರಮಗಳನ್ನು ಸರಕಾರ ಅಕ್ರಮ ಬೀಗಮುದ್ರೆ ಎಂದು ಘೋಷಿಸಿ, ಸರ್ಕಾರ 30-7-82 ತನ್ನ ಆಜ್ಞೆಯಲ್ಲಿ ಅಕ್ರಮ ಬೀಗಮುದ್ರೆಯನ್ನು ರದ್ದುಗೊಳಿಸಿದೆ. ಆದರೂ ಕೂಡ ಮಾಲೀಕು ಈ ಆಜ್ಞೆಯನ್ನು ಪಾಲಿಸದೆ ಕಾರ್ಮಿಕ ವಿರೋಧಿ ನೀತಿಯನ್ನು ಮುಂದುವರೆಸುತ್ತಿದ್ದಾರೆ.

ಪೋಲೀಸರ ಕಿರುಕುಳ :

ಮಾಲೀಕರು ಪೋಲೀಸರ ಸಹಾಯದಿಂದ ಹೊರಗಿನ ಕೆಲಸಗಾರರನ್ನು ಇಟ್ಟುಕೊಂಡು ಕೆಲಸಮಾಡಿಸಿಕೊಳ್ಳುತ್ತಿದ್ದಾರೆ ಕಾರ್ಮಿಕರ ಸಭೆ, ಮೆರವಣಿಗೆ, ಮತ ಪ್ರದರ್ಶನೆಗಳಿಗೆ ಅವಕಾಶ ಕೊಡುತ್ತಿಲ್ಲ. ಮಾಲೀಕರ ಏಂಜಲಿನಿಂದ ಸಂತೃಪ್ತರಾಗಿರುವ ಪೋಲೀಸರು ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆ ಹಾಕುತ್ತಿದ್ದಾರೆ.

ಹೋರಾಟ ಮುಂದುವರೆಯುವದು :

ಸರ್ಕಾರ ಆಜ್ಞೆ ಮಾಡಿರುವಂತೆ ಮಾಲೀಕರು ಬೀಗಮುದ್ರೆಯನ್ನು ತೆಗೆಯದೆ ಕೆಲಸಗಾರರಿಗೆ ಕೆಲಸ ನಿರಾಕರಿಸುವದನ್ನು ಮುಂದುವರೆಸಿದಲ್ಲಿ ಹೋರಾಟ ತೀವ್ರಗೊಳಿಸಬೇಕಾಗುತ್ತದೆಂದು ಸಂಘದ ಅಧ್ಯಕ್ಷ ಕಾಂ। ಅನಂತರಾಮ್ ಎಚ್ಚರಿಸಿದ್ದಾರೆ. ತನ್ನ ಆಜ್ಞೆಯನ್ನು ಉಲ್ಲಂಘಿಸುತ್ತಿರುವ ಮಾಲೀಕರಿಗೆ ಕುಮ್ಮಕ್ಕು ಕೊಡುತ್ತಿರುವ ಪೋಲೀಸ್ ಇಲಾಖೆಗೆ ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಸರ್ಕಾರಕ್ಕೆ ಅನಂತರಾಮ್ ಒತ್ತಾಯಿಸಿದ್ದಾರೆ.

●

ಸಂತಾಪ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಪಡೀಲು ಕಾಂ। ಕೆ. ನಾರಾಯಣ ಶೆಟ್ಟಿಯವರು ಜುಲೈ 25 ರಂದು ನಿಧನರಾದ ವಾರ್ತೆ ಬಂದಿದೆ.

ಸಿ. ಪಿ. ಐ; (ಎಂ) ಮಂಗಳೂರು ತಾಲ್ಲೂಕಿನ ಅಳಪೆ ಶಾಖೆಯು ಕಾಂ। ನಾರಾಯಣ ಶೆಟ್ಟಿಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.

* * *

ಸಿ. ಪಿ. ಐ. (ಎಂ) ಹಿತೈಷಿಗಳೂ, ಗೇರುಬೀಜ ಕಾರ್ಮಿಕ ಸಂಘಟನೆಯಲ್ಲಿ ಕಾರ್ಯಕರ್ತರಾಗಿ ದುಡಿಯುತ್ತಿದ್ದ ಶ್ರೀಮತಿ ಕಪುಲ ಅವರು 6-8-82 ರಂದು ನಿಧನರಾಗಿದ್ದಾರೆ. ಸಿ. ಪಿ. ಐ. (ಎಂ) ದೊರೆಬೈಲು ಶಾಖೆಯು ಸಭೆ ಸೇರಿ ತನ್ನ ಸಂತಾಪ ವ್ಯಕ್ತಪಡಿಸಿದೆ.

ರೈತ ಸಂಘದ ಚಟುವಟಿಕೆಗಳು

ಬಿಜಾಪುರ :

ಜಿಲ್ಲಾ ರೈತ ಸಂಘದ ಎರಡನೇ ಸಮ್ಮೇಳನ

ಜುಲೈ 25 ಮತ್ತು 26 ರಂದು ಬಿಜಾಪುರದಲ್ಲಿ ಜಿಲ್ಲಾ ರೈತ ಸಂಘದ ಎರಡನೇ ಸಮ್ಮೇಳನ ನಡೆಯಿತು.

ಸಮ್ಮೇಳನಕ್ಕೆ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾಂ| ಚಂದ್ರಶೇಖರ ಬಾಳೆ, ಖಜಾಂಚಿ ಕಲ್ಲಪ್ಪ ಕಿರಣಗಿ ಇವರುಗಳು ಆಗಮಿಸಿದ್ದರು. ದಿನಾಂಕ 25 ರಂದು ಆರಂಭವಾದ ಸಮ್ಮೇಳನದ ಕಲಾಪಗಳನ್ನು ಕಾಂ| ಭೀಮಶಿ ಕಲಾದಗಿ, ಎಸ್. ಬಿ. ಮುಳವಾಡ ಮತ್ತು ಎಸ್. ಎಂ. ಕಪಾಲಿ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿ ನಿರ್ವಹಿಸಿತು. ಕಾರ್ಯದರ್ಶಿ ಎಮ್. ಆಯ್. ಪಾಟೀಲರು ವಾರ್ಷಿಕ ವರದಿಯನ್ನು ಸಲ್ಲಿಸಿದರು ವರದಿ ಸರ್ವಾನುಮತದಿಂದ ಅಂಗೀಕಾರವಾಯಿತು.

ಈ ಕೆಳಕಂಡವರನ್ನು ನೂತನ ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಗಿದೆ :

ಕಾಂ| ಭೀಮಶಿ ಕಲಾದಗಿ ಅಧ್ಯಕ್ಷರಾಗಿ, ಉಪಾಧ್ಯಕ್ಷರುಗಳಾಗಿ ಫಕೀರಪ್ಪ ಚ. ಗುಡ್ಡದ ಮತ್ತು ಜಿ. ಎಸ್. ಮುಂಜಾನವರ, ಕಾರ್ಯದರ್ಶಿಯಾಗಿ ಎಮ್. ಆಯ್. ಪಾಟೀಲ, ಸಹ ಕಾರ್ಯದರ್ಶಿಗಳಾಗಿ ಎ. ಎಚ್. ಹೊನ್ನುಟಗಿ ಮತ್ತು ಎಸ್. ಎಂ. ಕಪಾಲಿ ಹಾಗೂ ಸಿ. ಬಿ. ಮಣ್ಣೂರ ಇವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು.

ಸಮ್ಮೇಳನದ ಅಂಗವಾಗಿ ದಿನಾಂಕ 26 ರಂದು ಮಧ್ಯಾಹ್ನ 2 ಘಂಟೆಗೆ ನೀಲಕಂಠೇಶ್ವರ ದೇವಸ್ಥಾನದಿಂದ ಭಾರೀ ಮೆರವಣಿಗೆ ಹೊರಡಿಸಲಾಗಿತ್ತು. ಡೋಳು, ಹಲಿಗೆ, ಮಜಲು ಮುಂತಾದ ವಾದ್ಯಗಳಿಂದ ಕೂಡಿದ ಮೆರವಣಿಗೆಯಲ್ಲಿ 3–4 ಸಾವಿರ ರೈತರು ಪಾಲ್ಗೊಂಡಿದ್ದರು. ಮೆರವಣಿಗೆ ಡಿ. ಸಿ. ಆಫೀಸ್ ತಲುಪಿದ ಮೇಲೆ ಕಾಂ| ಭೀಮಶಿ ಕಲಾದಗಿಯವರ ನೇತೃತ್ವದ ನಿಯೋಗವೊಂದು ಡಿ. ಸಿ. ಯವರಲ್ಲಿ ತೆರಳಿ ರೈತರ ಬೇಡಿಕೆಗಳನ್ನೊಳಗೊಂಡ ಮನವಿ ಸಲ್ಲಿಸಿತು.

ಸಾಯಂಕಾಲ 5 ಘಂಟೆಗೆ ನಗರದ ಬಸವೇಶ್ವರ ಚೌಕದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ| ಭೀಮಶಿ ಕಲಾದಗಿ, ಚಂದ್ರಶೇಖರ ಬಾಳೆ, ಕಲ್ಲಪ್ಪ ಕಿರಣಗಿ ಮುಂತಾದವರು ಮಾತನಾಡಿದರು. ಆರಂಭದಲ್ಲಿ ಎ. ಎಚ್. ಹೊನ್ನುಟಗಿ ಸ್ವಾಗತಿಸಿದರು. ಕೊನೆಯಲ್ಲಿ ಮಣ್ಣೂರ ಅವರು ವಂದಿಸಿದರು.

ಊರುಕೆರೆ :

ರೈತ ಕೃಷಿ ಕೂಲಿಕಾರರ ಸಂಘದ ವಿಸ್ತೃತ ಸಭೆ

8–8–82 ರಂದು ತುಮಕೂರು ಕಸಬಾ ಊರುಕೆರೆಯಲ್ಲಿ ಸ್ಥಾಪಿಸಿರುವ ರೈತ–ಕೃಷೀ ಕೂಲಿಕಾರರ ವಿಸ್ತೃತ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಶ್ರೀ ಮುದ್ದುರಂಗನಾಯ್ಕರ್ ಅವರು ವಹಿಸಿದ್ದರು.

ಆರಂಭದಲ್ಲಿ ಶ್ರೀ ರಂಗಪ್ಪದಾಸರು ಸಂಘದ ಸ್ಥಾಪನೆ, ಬೆಳವಣಿಗೆ ಮತ್ತು ಸದಸ್ಯರ ಕರ್ತವ್ಯಗಳ ಬಗ್ಗೆ ಮಾತನಾಡಿ ಸಂಕ್ಷಿಪ್ತ ವರದಿಯನ್ನು ಒಪ್ಪಿಸಿದರು. ಕಾಂ| ಟಿ.ಕೆ.ಗೋವಿಂದರಾಜು ಅವರು ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಂ| ಎಚ್. ಸಿ. ಚಿನ್ನಪ್ಪ ಮತ್ತು ಕೆ. ಆರ್. ನಾಯಕ್ ಅವರು ಮಾತನಾಡುತ್ತಾ, ರೈತ–ಕೃಷಿ ಕೂಲಿಕಾರರ ಜರೂರು ಬೇಡಿಕೆಗಳ ಬಗ್ಗೆ ವಿವರಗಳನ್ನಿತ್ತು, ಈ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟದ ಅವಶ್ಯಕತೆಗಳು ಮತ್ತು ಸಂಘದ ಬೆಳವಣಿಗೆಗಳಿಗಾಗಿ ಮಾರ್ಗದರ್ಶನ ನೀಡಿದರು.

ಕೊನೆಯಲ್ಲಿ ಸಂಘದ ಸಂಚಾಲಕರಾದ ಟಿ ಎಚ್. ನರಸಿಂಹಯ್ಯನವರು ವಂದನಾರ್ಪಣೆ ಮಾಡಿದರು.

ಕೀರಣಗಿ :

ಗ್ರಾಮ ಘಟಕದ ಸಭೆ

6–8–82 ರಂದು ಗುಲ್ಬರ್ಗಾ ಜಿಲ್ಲೆಯ ಕೀರಣಗಿ ಗ್ರಾಮದಲ್ಲಿ ರೈತ ಸಂಘದ ಗ್ರಾಮ ಘಟಕದ ಸಭೆ ಸೇರಿತ್ತು.

ಕಾಂ| ಕಲ್ಲಪ್ಪ ಮತ್ತು ಶಾಂತಯ್ಯ ಇವರುಗಳು ಮಾತನಾಡಿ, ಪ್ರಾಂತ ಸಂಘವು ಸರಕಾರಕ್ಕೆ ಸಲ್ಲಿಸಲಿರುವ ಮನವಿಯ ಕುರಿತು, ಈ ಮನವಿಗೆ ಸಹಿ ಸಂಗ್ರಹಿಸುವ ಅಗತ್ಯತೆಯ ಕುರಿತು ವಿವರಿಸಿದರು.

ಆಗಸ್ಟ ಕೊನೆಯ ವಾರದಲ್ಲಿ ವಿಧಾನ ಸೌಧ ಚಲೋ ಕಾರ್ಯಕ್ರಮ ಯಶಸ್ವಿಗೊಳಿಸಲು ಮತ್ತು ಕೀರಣಗಿ ಗ್ರಾಮದಲ್ಲಿ 3000 ಸಹಿ ಸಂಗ್ರಹ ಪೂರೈಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪುತ್ತೂರು :

ಸರಕಾರದ ಜನದ್ರೋಹಿ ನೀತಿ ಖಂಡಿಸಿ ಬಹಿರಂಗ ಸಭೆ

2-8–82 ರಂದು ರೈತ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಕಾಂ| ಚನಿಯಪ್ಪ ಗೌಡರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾಂ| ಬಿ. ರಾಮಕೃಷ್ಣ ಅವರು ಮಾತನಾಡಿ ಬಡವರ ಹೆಸರಿನಿಂದ ಅರಿಸಿ ಬಂದ ಕಾಂಗ್ರೆ ನೇತೃತ್ವದ ಸರಕಾರ ನಡೆಸುತ್ತಿರುವ ಅಕ್ರಮಗಳನ್ನು ಕಟುವಾಗಿ ಟೀಕಿಸಿದರು. ಅವರು ಮುಂದುವರೆದು, ಕೃಷಿಯೋಗ್ಯ ಭೂಮಿಯನ್ನು ಕೃಷಿ ಅಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ ಕಾಡು–ತೋಟ ಬೆಳೆಸುವ ಸರಕಾರದ ನೀತಿಯ ವಿರುದ್ಧ ಪ್ರತಿಭಟಿಸಲು ಕರೆ ನೀಡಿದರು.

ಕಾಂ| ಚನಿಯಪ್ಪ ಗೌಡರು ಮಾತನಾಡಿ ಸರಕಾರದ ಜನದ್ರೋಹಿ ನೀತಿಗಳ ವಿರುದ್ಧ ಅವಿರತ ಹೋರಾಟ ನಡೆಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಕೃಷಿ ಕಾರ್ಮಿಕರು ಕೆಲವು ಬೇಡಿಕೆಗಳುಳ್ಳ ಮನವಿ ಪತ್ರವನ್ನು ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರರಿಗೆ ಸಲ್ಲಿಸಿದರು.

ಮನವಿಯ ಮುಖ್ಯಾಂಶಗಳು

ಸರಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಭೂರಹಿತ ಕೃಷಿಕರನ್ನು ಒಕ್ಕಲೆಬ್ಬಿಸಬಾರದು; ಹಲವಾರು ಪ್ರದೇಶಗಳಲ್ಲಿ ನೂರಾರು ಎಕ್ರೆ ಭೂಮಿಯನ್ನು ಕಾನೂನು ಬಾಹಿರವಾಗಿ ಆಕ್ರಮಿಸಿರುವ ಶ್ರೀಮಂತ ಭೂಮಾಲೀಕರ ವಿರುದ್ಧ ಕ್ರಮಕೈಗೊಂಡು, ಆ ಭೂಮಿಯನ್ನು ಭೂರಹಿತರಿಗೆ ಹಂಚಬೇಕು; ಅರಣ್ಯ ಇಲಾಖೆಯವರು ಆಕ್ಷೇಪಣೆಯಿಂದ ಖಾಯಂ ಆಗದೆ ಬಾಕಿ ಇರುವ ದರ್ಖಾಸ್ತುದಾರರಿಗೆ ಕೂಡಲೇ ಸಾಗುವಳಿ ಚೀಟಿಕೊಡಬೇಕು; ಬರಡು ಭೂಮಿಯಲ್ಲಿ ಮಾತ್ರ ಕಾಡು ಬೆಳೆಸುವ ಯೋಜನೆ ಹಾಕಿಕೊಳ್ಳಬೇಕು... ಇತ್ಯಾದಿ.

ಐಕ್ಯರಂಗ ಪತ್ರಿಕೆಯನ್ನು ಓದಿ

ಬೆಂಗಳೂರು

ತರಬೇತಿ ಶಿಬಿರ

ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯಕರ್ತರ ತರಬೇತಿ ಶಿಬಿರವು 4–8–82 ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ಲಕ್ಷ್ಮೀಪುರದಲ್ಲಿ ನಡೆಯಿತು.

ಕಾರ್ಯಕರ್ತರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ| ಪಿ. ರಾಮಚಂದ್ರರಾವ್ ಅವರು ಮಾತನಾಡಿ ರೈತ ಸಂಘಟನೆಯ ಉದ್ದೇಶ ಮತ್ತು ಸಂಘಟನೆಯ ಅವಶ್ಯಕತೆ ಬಗ್ಗೆ ವಿವರಿಸಿದರು. ಕಾಂ| ಜಗನ್ನಾಥ ಅವರು ಮಾತನಾಡುತ್ತಾ, ಜಿಲ್ಲೆಯ ರೈತ ಸಂಘದ ಚಟುವಟಿಕೆ ಮತ್ತು ಹೋರಾಟಗಳ ಬಗ್ಗೆ ವಿವರಿಸಿದರು.

ಕಾಂ| ಪಿ. ಕೆ. ಸುಬ್ರಮಣಿಯವರು ಮಾತನಾಡುತ್ತಾ, ಗ್ರಾಮಾಂತರ ಪ್ರದೇಶದಲ್ಲಿ ರೈತರ ಸಂಘಟನೆಯನ್ನು ಬಲಪಡಿಸಿ ನಗರದ ಕಾರ್ಮಿಕರೂ, ರೈತರೂ ಒಟ್ಟಾಗಿ ಹೋರಾಟ ನಡೆಸುವ ಅವಶ್ಯಕತೆಯನ್ನು ವಿವರಿಸಿದರು.

ಕೊನೆಯಲ್ಲಿ, ಪ್ರಾಂತ ರೈತ ಸಂಘದ ಕರೆಯಂತೆ ದಶಲಕ್ಷ ಸಹಿ ಸಂಗ್ರಹ ಕಾರ್ಯಕ್ರಮ ನಡೆಯುತ್ತಿದ್ದು, ಇನ್ನೂ ತೀವ್ರಗೊಳಿಸುವಂತೆ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಲಕ್ಷ್ಮಣ್ಣ ಮನವಿ ಮಾಡಿದರು.

●

ಕೊಮಾರ್ನಹಳ್ಳಿ ತಾಂಡ

ಐಕ್ಯ ಹೋರಾಟಕ್ಕೆ ಸಿದ್ಧರಾಗಿ-ಹಳಕಟ್ಟಿ

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕೊಮಾರ್ನಹಳ್ಳಿ ತಾಂಡಾದಲ್ಲಿ ಪ್ರಾಂತ ರೈತ ಸಂಘದ ಘಟಕ ಪ್ರಾರಂಭವಾಗಿದೆ. (ವಿವರ ಐಕ್ಯರಂಗ ಆಗಸ್ಟ 1), 24-7–82 ರಂದು ಇಲ್ಲಿ ಬಹಿರಂಗ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ಆಗಮಿಸಿದ್ದರು ಕಾಂ| ಹಳಕಟ್ಟಿ ಮಾತನಾಡುತ್ತಾ ಸ್ಥಳೀಯ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ರೈತರು ಮತ್ತು ಕೂಲಿಕಾರರು ರಾಜ್ಯದಾದ್ಯಂತ ಐಕ್ಯ ಹೋರಾಟ ಮಾಡಬೇಕಾದ ಕಾರಣಗಳನ್ನು ವಿವರಿಸಿ, ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರ ಹೋರಾಟ ನಡೆಸಲು ಕರೆ ನೀಡಿದರು.

ಆರಂಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಕಾಂ| ಪಿ. ಆರ್. ವೆಂಕಟೇಶ್ ಸ್ವಾಗತಿಸಿದರು. ಸ್ಥಳೀಯ ಘಟಕದ ಪದಾಧಿಕಾರಿ ಸಾಣ್ಯಾನಾಯ್ಕ ಅವರು ಹಳ್ಳಿಯ ಸಮಸ್ಯೆಗಳ ವಿವರಣೆ ನೀಡಿದರು. ಕಾರ್ಯದರ್ಶಿ ಪೂವ್ಯಾನಾಯ್ಕ ವಂದನಾರ್ಪಣೆ ಮಾಡಿದರು.

ಪಿ ಎಲ್. ಡಿ ಬ್ಯಾಂಕ್‌ನ ದಬ್ಬಾಳಿಕೆ

ವಿರುದ್ಧ ಬೃಹತ್ ಮೆರವಣಿಗೆ

2-8–82 ರಂದು ಪಿ. ಎಲ್. ಡಿ. ಬ್ಯಾಂಕ್‌ನ ದಬ್ಬಾಳಿಕೆಯನ್ನು ಪ್ರತಿಭಟಿಸಿ ಕೊಮಾರ್ನಹಳ್ಳಿ ತಾಂಡಾದಿಂದ ನೂರಾರು ರೈತರು ಹೂವಿನ ಹಡಗಲಿಗೆ ಕಾಲ್ನಡಿಗೆಯಿಂದ (9 ಮೈಲು) ತೆರಳಿ ಪಿ. ಎಲ್. ಡಿ. ಬ್ಯಾಂಕಿನೆದುರು ಮತ ಪ್ರದರ್ಶನ ನಡೆಸಿದರು.

ಸಕಾಲಕ್ಕೆ ಸಾಲ ಮಂಜೂರು ಮಾಡದೇ, ಬಾವಿಗಳು ಹಾಳು ಬಿದ್ದ ಸ್ಥಿತಿಯಲ್ಲಿರುವಾಗಲೇ ಸಾಲ ವಸೂಲಿಗೆ ಬಲಾತ್ಕಾರ ಮಾಡುತ್ತಿರುವ ಬ್ಯಾಂಕ್ ಅಧಿಕಾರಿಗಳ ಕ್ರಮವನ್ನು ಪ್ರತಿಘಟಿಸಿ ಈ ಮತ ಪ್ರದರ್ಶನ ನಡೆಯಿತು. ಕಾಂ| ಪಿ. ಆರ್. ವೆಂಕಟೇಶ್ ನೇತೃತ್ವ ವಹಿಸಿದ್ದರು.

ಬೇಡಿಕೆಗಳನ್ನು ಮನ್ನಿಸದಿದ್ದಲ್ಲಿ ಚಳವಳಿ ತೀವ್ರಗೊಳಿಸಬೇಕಾದೀತೆಂದು ಎಚ್ಚರಿಸಲಾಯಿತು.

ಗಮನಿಸಿ

ಕಳೆದ ತಿಂಗಳ 11ನೇ ದಿನಾಂಕದ ಪತ್ರಿಕೆಯಲ್ಲಿ ದಾಂಡೇಲಿ ಪೇಪರ್ ಮಿಲ್‌ನಲ್ಲಿ ಅಪಘಾತ ನಡೆದು ಹನುಮಂತಪ್ಪ ಉಪ್ಪಾರ ಎಂಬ ಕಾರ್ಮಿಕ ಮೃತನಾದ ಸುದ್ದಿ ಪ್ರಕಟವಾಗಿತ್ತು.

ಪೇಪರ್ ಮಿಲ್‌ನ ಆಡಳಿತ ವರ್ಗದೊಡನೆ ಮುನಿಸಿಪಲ್ ಕೌನ್ಸಿಲರುಗಳು ಹಾಗೂ ಇತರ ಕಾರ್ಮಿಕ ಮುಖಂಡರು ಮಾತುಕತೆ ನಡೆಸಿ ಒಂದು ತೀರ್ಮಾನಕ್ಕೆ ಬರಲಾಗಿತ್ತು. (ವಿವರ ಈಗಾಗಲೇ ಪ್ರಕಟವಾಗಿದೆ). ಮಾತುಕತೆಯಲ್ಲಿ ಭಾಗವಹಿಸಿದವರಲ್ಲಿ ಮುನಿಸಿಪಲ್ ಕೌನ್ಸಿಲರ್ ಕಾಂ| ಎಂ. ಆರ್. ನಾಯ್ಕು ಮತ್ತು ಕಾಂ| ಹರೀಶ್ ಅವರೂ ಪಾಲ್ಗೊಂಡಿದರು.

ಅಕ್ಟೋಬರ್ ೪ ರಂದು ದೆಹಲಿಯಲ್ಲಿ ಶಾಂತಿಯಾತ್ರೆ

ಜುಲೈ 20 ರಂದು ದೆಹಲಿಯಲ್ಲಿ ಆರು ಪಕ್ಷಗಳು ಶಾಂತಿ ಚಳುವಳಿಯನ್ನು ಸಂಘಟಿಸುವ ಕುರಿತಾಗಿ ಹೊರಡಿಸಿದ್ದ ಜಂಟೀ ಹೇಳಿಕೆಯನ್ನು ಆಗಸ್ಟ್ 8ರ ಐಕ್ಯರಂಗದಲ್ಲಿ ಪ್ರಕಟಿಸಿದ್ದೆವು. ಅಕ್ಟೋಬರ್ 4 ರಂದು ನಡೆಯಲಿರುವ ಶಾಂತಿ ಯಾತ್ರೆಯನ್ನು ಯಶಸ್ವಿ ಮಾಡುವ ಹೊಣೆಗಾರಿಕೆ ಎಲ್ಲ ಶಾಂತಿ ಪ್ರೇಮಿಗಳ ಮೇಲಿದೆ.

ಈ ಹೋರಾಟವು ದೇಶದ ವಿವಿಧ ಪ್ರದೇಶಗಳಲ್ಲಿ ಮುತಪ್ರದರ್ಶನ; ಯುದ್ಧ ವಿರೋಧಿ ಸಮಾವೇಶಗಳು; ಪಾರ್ಲಿಮೆಂಟ್, ಶಾಸನಸಭೆ ಸದಸ್ಯರುಗಳ, ಬುದ್ಧಿಜೀವಿಗಳು ಇವರಿಂದ ಹೇಳಿಕೆಗಳು; ಸ್ಥಳೀಯ ಸಂಸ್ಥೆಗಳಿಂದ, ಸಾಮೂಹಿಕ ಸಂಘಟನೆಗಳಿಂದ ಠರಾವುಗಳು, ಇವುಗಳ ರೂಪದಲ್ಲಿರುತ್ತದೆ. ಇವೆಲ್ಲವುಗಳಿಗೆ ಪೂರಕವಾಗಿ ಅಕ್ಟೋಬರ್ 4 ರಂದು ದೆಹಲಿಯಲ್ಲಿ ಭಾರೀ ಮುತಪ್ರದರ್ಶನ ನಡೆಯಲಿದೆ.

ಈ ಚಳವಳಿಯಲ್ಲಿ ಭಾಗವಹಿಸುವಂತೆ ಎಲ್ಲ ಪಕ್ಷಗಳನ್ನೂ, ಸಾಮೂಹಿಕ ಸಂಘಟನೆಗಳನ್ನೂ ಆರುಪಕ್ಷಗಳ ನಾಯಕರು ವಿನಂತಿಸಿದ್ದಾರೆ. ತನ್ಮೂಲಕ ಅಣುಯುದ್ಧದ ವಿರುದ್ಧವಾದ ಜಾಗತಿಕ ಹೋರಾಟವನ್ನು ಬಲಗೊಳಿಸಬೇಕೆಂದು ಅವರು ವಿಜ್ಞಾಪಿಸಿ ಕೊಂಡಿದ್ದಾರೆ.

ಘೋಷಣೆಗಳು

* ಅಣ್ವಸ್ತ್ರ ಪೈಪೋಟಿಯನ್ನು ಕೊನೆಗೊಳಿಸಿ—

* ಹಿಂದೂ ಮಹಾಸಾಗರವನ್ನು ಶಾಂತಿವಲಯವನ್ನಾಗಿ ಪರಿವರ್ತಿಸಿ; ಪಾಕಿಸ್ತಾನದ ಜೀಯಾ ಆಡಳಿತಕ್ಕೆ ಭಾರೀ ಪ್ರಮಾಣದಲ್ಲಿ ಮಾಡುತ್ತಿರುವ ಶಸ್ತ್ರ ಸಹಾಯವನ್ನು ನಿಲ್ಲಿಸಿ.

* ಲೆಬನಾನ್‌ನಲ್ಲಿ ಇಸ್ರೇಲ್ ಆಕ್ರಮಣ ಕೊನೆಗೊಳ್ಳಲಿ, ಲೆಬನಾನ್ ಜನರ, ಪ್ಯಾಲೆಸ್ತೀನ್ ವಿಮೋಚನಾ ಹೋರಾಟಗಾರರ ಜನಾಂಗ ಹತ್ಯೆ ನಿಲ್ಲಿಸಿ.

ನ್ಯೂಟ್ರಾನ್ ರಾಕ್ಷಸಿ ಸಾಮ್ರಾಜ್ಯಶಾಹಿಗಳ ವಿಷಕನ್ಯೆ

— ರಂಜಾನ್ ದುರ್ಗಾ

ನ್ಯೂಟ್ರಾನ್ ಬಾಂಬ್
ನ್ಯಾಟೋ ರಾಷ್ಟ್ರಗಳ ಮುಖವಾಣಿ.
ದೊಡ್ಡ ದೊಡ್ಡ ಕಂಪನಿಗಳನ್ನು
ಉದ್ದುದ್ದನೆಯ ಕಟ್ಟಡಗಳನ್ನು
ಹಾಳು ಮಾಡುವುದಿಲ್ಲ ನ್ಯೂಟ್ರಾನ್.

ಕಲ್ಲು ಕಲ್ಲಾಗಿಯೇ ಉಳಿಯುತ್ತದೆ
ಮನುಷ್ಯರು ಮಾತ್ರ ಮಣ್ಣಾಗುತ್ತಾರೆ.
ನಮ್ಮ ನಾಗರೀಕತೆಯೂ ಉಳಿಯುತ್ತದೆ—
ಇನ್ನೊಂದು ಬರುವವರೆಗೆ.

ನ್ಯೂಟ್ರಾನ್ ಉಸಿರಾಡಿದಾಗೆಲ್ಲ
ನಮ್ಮ ಉಸಿರು ನಿಲ್ಲುತ್ತದೆ.
ನ್ಯೂಟ್ರಾನ್ ನಮ್ಮ ತಲೆ ಸೀಳುವುದಿಲ್ಲ
ಹೊಟ್ಟೆ ಹರಿಯುವುದಿಲ್ಲ
ಅದು ಗೊಬೆಲ್ಸ್‌ನ ಸತ್ಯದಂತೆ
ನಮ್ಮ ಪ್ರಾಣ ಸವರುತ್ತದೆ.

ನಮ್ಮ ಹೆಣಗಳ ಮೇಲೆ
ವಿಜ್ಞಾನದ ಗೋರಿ ಕಟ್ಟುತ್ತದೆ.
ಅದು ನಮ್ಮಿಂದ ಏನನ್ನೂ ಕಸಿದುಕೊಳ್ಳುವುದಿಲ್ಲ
ಚಿಲ್ಲರೆ ಜೀವವೊಂದನ್ನುಳಿದು.

ಅದು ಏನನ್ನೂ ಧ್ವಂಸ ಮಾಡುವುದಿಲ್ಲ
ಆದರೆ ತನ್ನ ಮಂಜುದುಟಿಗಳಿಂದ
ನಮ್ಮ ಆತ್ಮಕ್ಕೆ ಮುದ್ದಿಡುತ್ತದೆ.

ಬದುಕಿನ ಮೇಲೆ ಬಲಾತ್ಕಾರ ಮಾಡುವ
ಚಟಗಾರ್ತಿ, ಈ ನ್ಯೂಟ್ರಾನ್ ರಾಕ್ಷಸಿ
ಸಾಮ್ರಾಜ್ಯಶಾಹಿಗಳ ವಿಷಕನ್ಯೆ.

"ಸೋವಿಯೆತ್ ದೇಶ" ಕೃಪೆ.

ಮಂಗಳೂರು :

ಸಿಟಿಬಸ್ ಡ್ರೈವರ್‌ನನ್ನು ಥಳಿಸಿದ ಪೋಲೀಸ್ ಕಾನ್‌ಸ್ಟೇಬಲ್ ಅಮಾನತು

ಸಿಟಿ ಬಸ್ ಡ್ರೈವರೊಬ್ಬರನ್ನು ಮಂಗಳೂರು ಪೂರ್ವ ಟ್ರ್ಯಾಫಿಕ್ ಪೋಲೀಸ್ ಸ್ಟೇಶನ್ನಿನ ಇಬ್ಬರು ಕಾನ್‌ಸ್ಟೇಬಲ್‌ರು ಸ್ಟೇಶನ್ನಿಗೆ ಕರೆದೊಯ್ದು ಥಳಿಸಿದ್ದನ್ನು ಪ್ರತಿಭಟಿಸಿ, ತಪ್ಪಿತಸ್ಥ ಪೋಲೀಸರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ 2–8–82 ರಂದು ಸಿಟಿ ಬಸ್ ಮುಷ್ಕರ ನಡೆಸಲು ಮೋಟಾರ್ ಟ್ರಾನ್ಸ್‌ಪೋರ್ಟ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಕರೆ ನೀಡಿತ್ತು.

ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಮನಗಂಡ ಜಿಲ್ಲಾ ಪೋಲೀಸ್ ಅಧಿಕಾರಿಯವರು ತಕ್ಷಣ ಹಲ್ಲೆ ನಡೆಸಿದ ಕಾನ್‌ಸ್ಟೇಬಲ್‌ರನ್ನು ಅಮಾನತು ಮಾಡಿ ತನಿಖೆಗೆ ಆಜ್ಞೆ ಮಾಡಿದರು. ಈ ಹಿನ್ನೆಲೆಯಲ್ಲಿ 1–8–82ರಂದು ಸಿಟಿ ಬಸ್ ಡ್ರೈವರುಗಳು ಮತ್ತು ಕಂಡಕ್ಟರುಗಳ ತುರ್ತು ಸಭೆ ನಡೆದು ಜಿಲ್ಲಾ ಪೋಲೀಸ್ ಅಧಿಕಾರಿಯವರು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡಿದ್ದರಿಂದ ಮುಷ್ಕರ ಕೈಬಿಡಲು ನಿರ್ಧರಿಸಲಾಯಿತು.

ಇತ್ತೀಚೆಗೆ ಟ್ರ್ಯಾಫಿಕ್ ಪೋಲೀಸ್‌ರ ಕಿರುಕುಳ ಹೆಚ್ಚಾಗುತ್ತಿದ್ದು ಇಂತಹ ಘಟನೆಗಳು ಮುಂದೆ ನಡೆಯದಂತೆ ಕ್ರಮ ವಹಿಸಬೇಕೆಂದು ಪೋಲೀಸ್ ಜಿಲ್ಲಾಧಿಕಾರಿಯನ್ನು ಒತ್ತಾಯಿಸಲಾಯಿತು.

ಕಾಂ| ಜೋಶ್

ಖ್ಯಾತ ಕಮ್ಯೂನಿಸ್ಟ್ ಮುಂದಾಳು, ಸ್ವಾತಂತ್ರ್ಯ ಯೋಧ ಕಾಂ| ಸೋಹನ್ ಸಿಂಗ್ ಜೋಶ್ ಅವರು ಜುಲೈ 29 ರಂದು ಅಮೃತಸರದಲ್ಲಿ ನಿಧನರಾದರು. ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯು ಕಾಂ| ಜೋಶ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದೆ.

20ರ ದಶಕದಲ್ಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ ಕಾಂ| ಜೋಶ್, ಮೊದಲು ಅಕಾಲಿ ದಳದಲ್ಲಿ ಸಕ್ರೀಯರಾಗಿದ್ದರು. ನಂತರ ಕಮ್ಯೂನಿಸಂನತ್ತ ಆಕರ್ಷಿತರಾದರು.

ಮೀರತ್ ಮೊಕದ್ದಮೆಯಲ್ಲಿ ಅಪಾದಿತರಲ್ಲಿ ಕಾಂ| ಸೋಹನ್‌ಸಿಂಗ್ ಜೋಶ್ ಒಬ್ಬರಾಗಿದ್ದರು. ಪಂಜಾಬ್‌ನಲ್ಲಿ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಮುಂದಾಳುಗಳಲ್ಲೊಬ್ಬರಾಗಿದ್ದರು.

1964ರಲ್ಲಿ ಪಕ್ಷ ಇಬ್ಭಾಗವಾದಾಗ ಕಾಂ| ಜೋಶ್ ಸಿ. ಪಿ. ಐ. ನೊಟ್ಟಗುಳಿದರು

ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯು ಕಾಂ| ಜೋಶ್‌ರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಾ, ಅವರ ಕುಟುಂಬದ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ದ. ಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಭೀಕರ ನೆರೆ ಸೂಕ್ತ ಪರಿಹಾರ ನೀಡಲು ಸಿ ಪಿ ಐ.(ಎಂ) ಒತ್ತಾಯ

ಭೀಕರ ಜಡಿ ಮಳೆ ಮತ್ತು ನೆರೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಬಂಟ್ವಾಳ ಮತ್ತಿತರ ಕಡೆ ತುಂಬಾ ಹಾನಿಯಾಗಿದ್ದು ಸಾವಿರಾರು ಮನೆಗಳೂ, ಅಪಾರ ಸೊತ್ತುಗಳೂ ನಾಶವಾಗಿ ಜೀವಹಾನಿಯಾಗಿ ಅಸಂಖ್ಯಾತ ಜನರು ನಿರ್ಗತಿಕರಾದ ವಿಷಾದಕರವಾದ ಘಟನೆ ಸಂಭವಿಸಿದೆ. ಪ್ರತೀ ಮಳೆಗಾಲದಲ್ಲಿ ಜಿಲ್ಲೆಯ ಒಂದಲ್ಲಿ ಒಂದು ಕಡೆ ಈ ರೀತಿ ಪ್ರಕೃತಿ ವಿಕೋಪದಿಂದ ದುರ್ಘಟನೆಗಳು ನಡೆಯುತ್ತಾ ಬಂದಿದೆ. ಇದೇ ರೀತಿ 1974 ರಲ್ಲಿ ಮಂಗಳೂರು ಹಾಗೂ ಅನೇಕ ಕಡೆ ಭೀಕರ ನೆರೆ ಬಂದು ಸಹಸ್ರಾರು ಕುಟುಂಬಗಳು ಭಾರೀ ಸಂಕಷ್ಟಕ್ಕೊಳಗಾದ ಘಟನೆಯನ್ನು ಮರೆಯುವಂತಿಲ್ಲ.

ಆದುದರಿಂದ ಜಿಲ್ಲೆಯ ಕುಂದಾಪುರ, ಉಡುಪಿ, ಬಂಟ್ವಾಳ ಮತ್ತಿತರ ಕಡೆಗಳಲ್ಲಿ ನೆರೆಯಿಂದಾಗಿ ಅಪಾರ ಸೊತ್ತು; ಮನೆಮಾರುಗಳನ್ನು ಮತ್ತು ಜಾನುವಾರುಗಳನ್ನೂ ಕಳಕೊಂಡು ನಿರ್ಗತಿಕರಾದ ಜನರಿಗೆ ಸರಕಾರ ಯೋಗ್ಯ ಪರಿಹಾರ ನೀಡುವುದಲ್ಲದೆ ಪುನರ್ವಸತಿಗೆ ತುರ್ತು ಕ್ರಮ ವಹಿಸಬೇಕೆಂದು ನೆರೆ ಪರಿಹಾರ ಸಮಿತಿಯಲ್ಲಿ ಸರ್ವ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಿಕೊಂಡು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ವ್ಯವಸ್ಥೆ ಮಾಡಬೇಕೆಂದೂ ಜಿಲ್ಲೆಯಲ್ಲಿ ಇಂತಹ ಪ್ರಕೃತಿ ವಿಕೋಪದಿಂದ ಯಾವಾಗಲೂ ಹಾನಿ ಸಂಭವಿಸುವುದನ್ನು ತಪ್ಪಿಸಲು ಶಾಶ್ವತ ಯೋಜನೆಯೊಂದನ್ನು ಹಾಕಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ|ಕೆ.ಆರ್.ಶ್ರೀಯಾನ್‌ರವರು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರಿಸರ

● ಸರ್ಕಾರ ನರಸಿಂಹಯ್ಯನವರ ವಠಾರದಂತಿರುವ ಕಾಲೇಜುಗಳನ್ನಲ್ಲದೆ ಎಲ್ಲಾ ಶಾಲೆಗಳನ್ನೂ ವಹಿಸಿಕೊಂಡು ಕನ್ನಡೀಕರಿಸಬೇಕು—ಆಫೀಸು, ಕಾರ್ಖಾನೆ ಎಲ್ಲಾ ಕಡೆ ಕನ್ನಡದಲ್ಲಿ ವ್ಯವಹಾರ ಆರಂಭವಾಗಬೇಕು ; ಅಲ್ಲಿಯವರೆಗೆ ಬರೀ ಕ್ರಿಯಾ ಸಮಿತಿಯವರು ತಮ್ಮ ಮಕ್ಕಳಿಗೆ ಬೇರೆ ವಿದ್ಯಾಭ್ಯಾಸ ಕೊಟ್ಟರೆ ಅವರು ಮಾತ್ರ ಬಲಿಯಾಗುತ್ತಾರಷ್ಟೆ ! — ಲಂಕೇಶ್ ಪತ್ರಿಕೆ

● ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡದ ವಾತಾವರಣಕ್ಕೆ ಧಕ್ಕೆ ಉಂಟು ಮಾಡುತ್ತಿರುವ ಇಂಗ್ಲೀಷ್ ಮಾಧ್ಯಮದ ವಿಷಸರ್ಪ ಹುತ್ತದಲ್ಲಿ ಹಾಯಾಗಿ ಮಲಗಿ ಗೊರಕೆ ಹೊಡೆಯಲು ಸಹಾಯ ಮಾಡುತ್ತಿರುವ ಈ ನಾಯಕರು ಹುತ್ತದ ಮೇಲೆ ಉಪಾಯದಿಂದ ಹೊಡೆಯುತ್ತಾ ಕನ್ನಡ ರಕ್ಷಕರೆಂದು ಹೇಳಿಕೊಳ್ಳುತ್ತಿರುವುದು ಅತ್ಯಂತ ಶೋಚನೀಯ.

— ಡಾ|| ಹೆಚ್. ನರಸಿಂಹಯ್ಯ ಪ್ರಜಾವಾಣಿ 'ಓದುಗರ ವೇದಿಕೆಯಲ್ಲಿ'.

● ಅಧಿಕಾರಕ್ಕೆ ಬಂದವರಿಗೆಲ್ಲಾ ಸ್ನೇಹಿತರು ಇದ್ದೇ ಇರುತ್ತಾರೆ. ನಿಯಮಗಳ ಪ್ರಕಾರ ಅವರಿಗೆ ನೆರವಾಗುವುದರಲ್ಲಿ ತಪ್ಪೇನಿದೆ ? ಹಿಂದೆ ಅಧಿಕಾರದಲ್ಲಿರುವವರು ಯಾರೂ ಸ್ನೇಹಿತರಿಗೆ ನೆರವಾಗಿಲ್ಲವೇ ?

— ಗುಂಡೂರಾವ್, ಅಣ್ಣ ಗುತ್ತಿಗೆ ಅಪಾದನೆ ಕುರಿತು.

● ಈ ವರ್ಷದ ಪ್ರಥಮ ಅರ್ಧದಲ್ಲಿ ಕೆಲವು ಸರಕುಗಳಿಗೆ ಬೇಡಿಕೆ ಇಳಿದಿದೆ. ಆದರೆ ಇದರಿಂದ ಉತ್ಪಾದನೆಯಲ್ಲಿ ಯಾವುದೇ ಇಳುವರಿ ಕಂಡು ಬಂದಿಲ್ಲ. ಸಾರ್ವತ್ರಿಕ ಹಿಂಜರಿತವೇನೂ ಆರಂಭವಾಗಿಲ್ಲ. ಹಿಂಜರಿತದ ಕೂಗು ಎಬ್ಬಿಸಿ ಸಾಲ ನೀಡಿಕೆಯಲ್ಲಿ ಹೆಚ್ಚು ಸಡಿಲ ನೀತಿ ತರಲು ಹಾಗೂ "ಉತ್ಪಾದಕತಾ ವರ್ಷ"ದಲ್ಲಿ ಆರ್ಥಿಕ ರಿಯಾಯಿತಿ ಪಡೆಯಲು ಖಾಸಗಿ ವಲಯಗಳು ಪ್ರಯತ್ನಿಸುತ್ತಿವೆ ಎಂದು ಸರ್ಕಾರಿ ವಲಯಗಳ ಅಭಿಪ್ರಾಯ.

— ಇ. ಎನ್. ಎಸ್. ಅ. 2.

● ಹಿಂಜರಿತ ಎನ್ನುವುದು ಅಸ್ಪಷ್ಟ ಪದ ಪ್ರಯೋಗ. ಯಾರಗಾದರೂ ಅದರ ಅನುಭವವಾಗಿದ್ದಲ್ಲಿ ಅಂಥ ಉದ್ಯಮಗಳು ಸರ್ಕಾರದ ಗಮನ ಸೆಳೆದಾಗ ಪರಿಹಾರ ಸೂಚಿಸಲಾಗುವುದು. ಆರ್ಥಿಕ ಹಿಂಜರಿತದ ಬಗ್ಗೆ ಬಹಳ ಮಾತನಾಡಿ ವೃಥಾ ಗಾಬರಿ ಉಂಟು ಮಾಡಬಾರದು.

—ರಿಸರ್ವ್ ಬ್ಯಾಂಕ್ ಗವರ್ನರ್ ಡಾ|| ಐ. ಜಿ. ಪಟೇಲ್ ಗುಜರಾತ್ ವಾಣಿಜ್ಯೋದ್ಯಮ ಫೆಡರೇಷನ್‌ನಲ್ಲಿ.

● ರಾಜ್ಯದಲ್ಲಿ ನೀರಾವರಿ ಯೋಜನೆಗಳಿಂದ ಉಂಟಾದ ನೀರಾವರಿಯ ಸಾಮರ್ಥ್ಯದಲ್ಲಿ ಕೇವಲ ಮೂರನೇ ಒಂದು ಭಾಗವನ್ನು ಬಳಸಲಾಗಿದೆ. ಇದಕ್ಕೆ ಕಾರಣ ಸುಸಂಬದ್ಧ ಯೋಜನೆ, ಮೇಲ್ವಿಚಾರಣೆ ಮತ್ತು ಕಾರ್ಯ ನಿರ್ವಹಣೆಯ ಅಭಾವ.

— ಸಾರ್ವಜನಿಕ ಲೆಕ್ಕಪತ್ರದ ಸಮಿತಿಯು ವರದಿಯಲ್ಲಿ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office ;L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.